॥ ಶ್ರೀ ಶುಭಮಸ್ತು ॥

|| ನಿರ್ವಿಘ್ನಮಸ್ತು ||

ಶ್ರೀ ಕುಲದೇವತಾ ಪ್ರಸನ್ನಃ

ಶ್ರೀ ಮಹಾಭಾರತದ ಅರಣ್ಯಪರ್ವದೊಳಗಣ

ವೇಣಿಬಂಧನ

ಎಂಬ ಯಕ್ಷಗಾನ ಪ್ರಸಂಗ.

ಲೇಖಕ ಮತ್ತು ಪ್ರಕಾಶಕ:

ವಂಡ್ಸೆ ಪಾಂಡುರಂಗ ಅನಂತ ಶೆಣೈ,

ಫೊರೆಸ್ಟ ಕಂಟ್ರಾಕ್ಟರ್,

ವಂಡ್ಸೆ, ದ. ಕ.

ಬೆಲೆ: 0-8-0. (50 ನಯಾ ಪೈಸೆ)

ಸ್ಕೂಲ್ ಪ್ರೆಸ್ ಪ್ರೈವೇಟ್, ಲಿಮಿಟೆಡ್, ಗಂಗೊಳ್ಳಿ.

Scanned by CamScanner

॥ ಶ್ರೀ ಶುಭಮಸ್ತು ॥

|| ನಿರ್ವಿಘ್ನಮಸ್ತು ||

ಶ್ರೀ ಕುಲದೇವತಾ ಪ್ರಸನ್ನಃ

★

ಶ್ರೀ ಮಹಾಭಾರತದ ಅರಣ್ಯಪರ್ವದೊಳಗಣ

ಮಣಿಬಂಧನ

ಎಂಬ ಯಕ್ಷಗಾನ ಪ್ರಸಂಗ.

★

ಮುದ್ರಕರು:- ಸ್ಕೂಲ್ ಪ್ರೆಸ್ ಪ್ರೈವೇಟ್, ಲಿಮಿಟೆಡ್, ಗಂಗೊಳ್ಳಿ.

ಬೆಲೆ: 0–12–0. (75 ನಯಾ ಪೈಸೆ)

Scanned by CamScanner

ಪಾತ್ರ ಪರಿಚಯ.

ಧರ್ಮರಾಯ
ಭೀಮ
ಅರ್ಜುನ
ನಕುಲ
ಸಹದೇವ
ದ್ರೌಪದಿ
ಕೌರವ
ಕರ್ಣ
ಶಕುನಿ
ದುಶ್ಯಾಸನ
ನಾರದ
ಭೀಷ್ಮ

ಧೃತರಾಷ್ಟ್ರ
ಬಭ್ರುವಾಹನ
ಸುಬುದ್ಧಿ
ಲೂಪಿ
ಅಭಿಮನ್ಯು
ಸೌಭದ್ರೆ
ವಾಸುಕಿ
ಚಾರಕರು
ಸೈಂಧವ (ಜಯಧೃಥ)
ಜೋಯಿಸರು
ಧೌಮ್ಯಾದಿ ಮುನಿಗಳು
ಈಶ್ವರ

Scanned by CamScanner

ಶ್ರೀ

॥ ಶ್ರೀ ನಿರ್ವಿಘ್ನದಾಯಕಾಯ ನಮಃ ॥

ಶ್ರೀ ಮಹಾಭಾರತದ ಅರಣ್ಯಪರ್ವದೊಳಗಣ

ಏಣಿ ಬಂಧನ

ಶಾರ್ದೂಲವಿಕ್ರೀಡಿತಂ

ಶ್ರೀರಾಮಂ ಪವಮಾನಜಾತನಮಿತಂ ಸೀತಾಪತಿಂ ಸುಂದರಂ । ತಾರುಣ್ಯಾರ್ಕ ಸಮಾನತೇಜಭರಿತಂ ದೇವಂ ಜಗದ್ವಲಭಂ ॥ ಮಾರಾರಿ ಪ್ರಿಯಮಂಬುಜಾಸನಪಿತಂ ವಿಪ್ರಪ್ರಿಯಂ ಧಾರ್ಮಿಕಂ । ಕಾರುಣ್ಯಾಂಬುಧಿ ಭಕ್ತವೃಂದನಮಿತಂ ಶ್ರೀರಾಮಚಂದ್ರಂ ಭಜೇ ॥೧॥

ವಾರ್ಧಿಕ

ಮಾರಪಿತಸಖನ ಸುತನಂ ಮನದಿ ಧ್ಯಾನಿಸುತ । ಭಾರತಿಗೆ ನಮಿಸಿ ಮುನಿಜನಗಳಿಗೆ ವಂದಿಸುತ । ಕಾರಣಿಕರಾದ ಮಾತಾಪಿತೃಗಳಂ ಸ್ಮರಿಸಿ ಕವಿಜನಗಳಂ ಪ್ರಾರ್ಥಿಸಿ ॥ ಗುರುಹಿರಿಯರಡಿಗಳಿಗೆ ಪೊಡಮಡುತ ಇಂದಿರೆಯ। ಅರಸನಡಿಗಳಿಗೆರಗಿ ಸಾಧುಸಜ್ಜನರಿಂಗೆ । ಕರವಮುಗಿಯುತ್ತಲತಿ ಧೃಢಭಕ್ತಿಯಿಂದ ಪೇಳ್ವೆನು ಕಥಾಮೃತವನಿದನು ॥೧॥ ॥ ೨ ॥

ದ್ವಿಪದಿ

ಮಂಡಸೆಯಪುರದ ಮಧ್ಯದಲಿ ನೆಲಸಿರುವ । ರುಂಡಮಾಲಿಯ ಸುತನ

Scanned by CamScanner

ಸತತ ಧ್ಯಾನಿಸುವ ॥೧॥ ಖ್ಯಾತನಾಗಪ್ಪಯ್ಯ ರಚಿಸಿರುವ ಕೃತಿಯು । ಪ್ರೀತ್ರ ನಾಗುತಲೋದಿ ಹರುಷತಾಳಿರುವ ॥೨॥ ಅನುಜನಾಗಿಹ ಪಾಂಡುರಂಗ ನೆಂಬವನು । ಚಿನುಮಯುನ ಧ್ಯಾನಿಸುತ ಪೂರ್ಣಗೊಳಿಸಿದನು ॥೩॥ ವೇದ ಶಾಸ್ತ್ರಪುರಾಣ ಶೃತಿಸ್ಮೃತಿಗಳರಿಯೇ । ಆದಯಾನಿಧಿಯು ಕೃಪೆಯಿಂದಲಿದ ನೊರೆವೆ ॥೪॥ ಭಾರತದ ಕಥೆಯೊಳಗರಣ್ಯಪರ್ವದಲೀ । ಕೌರವನು ಖೇಚರ ನೋಳ್ ಸೆಣಸಿ ಗರ್ವದಲೀ ॥೫॥ ಸೋತವೋಲ್ ಬಿಡಿಸಿ ತಂದನು ಪಾರ್ಥ ನವನ । ಕಾತರಿಸಿ ಕುಮತಿ ತೆರಳೀರ್ದಪುರಕವನ ॥೬॥ ಸಂದಸಂತಸದಿಂದ ಲಿರುವ ಕುರುನೃಪನು । ಮುಂದೆಸಗಿರುವ ಕಾರ್ಯ ವಿವರಿಸುವೆನದನು ॥೭॥ ಒಡೆಯು ವಿಘ್ನೇಶ್ವರನು ನುಡಿಸಿದಂದದಲಿ । ಧೃಡದಿ ಧ್ಯಾನಿಸುತವನ ಪೇಳ್ವೆ ಭಕ್ತಿಯಲಿ ॥೮॥ ಬುಧರುತಪ್ಪುಗಳಿರಲು ಸರಿಗೈದರಿದನು । ಪದುಮನಾಭನು ಮುದದಲವರ ಸಲಹುವನು ॥೯॥

॥ ೧೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ.

ರಾಯು ಜನಮೇಜಯುಗೆ ವೈಶಂ । ಪಾಯು ಭಾರತಕಥೆಯು ಪೇಳ್ತಿರ । ಲಾ ಯತಿಯು ಪಾದಕ್ಕೆ ನಮಿಸುತ ರಾಯುನುಡಿದ ॥೧॥ ಕುರುಪತಿಗೆ ಖೇಚ ರನ ಸೆರೆಯಿಂ । ನರನು ಬಿಡಿಸಿದ ಬಳಿಕಲಾತನು । ಪುರಕೆ ಬಂದೇನ್ಗೈದ ನೆಂಬುದ । ನರುಹಿರೆನಗೆ ॥೨॥ ಎಂದು ಪೇಳ್ವುದ ಕೇಳುತಾಗ ಮು । ಕುಂದ ನನು ಧ್ಯಾನಿಸುತ ಮುನಿಪನು । ಮುಂದಣಾಗಿಹ ಕಥೆಯು ಪೇಳಿದ । ನಂದದಿಂದ ॥೩॥ ಖ್ಯಾತ ಜನಮೇಜಯುನೆ ಕೇಳೈ । ದ್ವೈತವನದೊಳಗೀರ್ದ ಕುಂತೀ । ಜಾತನೊಂದಿನ ಪೇಳ್ದ ತನ್ನನು । ಜಾತರೊಡನೆ ॥೪॥

॥ ೧೫॥

ರಾಗ ಭೈರವಿ–ಝಂಪೆತಾಳ.

ಅನುಜಾತರಿರ ಕೇಳಿ । ವನದೊಳತಿ ಸುಖದಿಂದ । ಇನಿತು ದಿನ ಚರಿಸಿ ದೆವು । ಚಿನುಮಯುನ ದಯುದಿ ॥೧॥ ದುಷ್ಟ ಕೌರವನಿಂದ । ಎಷ್ಟು ಕಷ್ಟಗ ಳ್ಪೆಂದ । ರಿಷ್ಟದಾಯುಕನು ದಯು । ವಿಟ್ಟು ಸಲಹಿದನು ॥೨॥ ನೂಕಿದೆವು ವನದೊಳಗೆ । ಏಕಾದಶ ವರುಷವನು । ಏಕೋಧೃಡದಿ ನುತಿಸಿ । ಆ ಕರುಣ ನಿಧಿಯು ॥೩॥ ಅಂದು ಕೌರವ ತಾನು । ಮಂದಿಮಾರ್ಬಲ ಸಹಿತ । ಇಂದು ಮುಖಿಯುರ ಕೂಡಿ । ಚಂದದಿಂ ಬರಲು ॥೪॥ ಗೋತ್ರಾರಿಯಾಜ್ಞೆಯಲಿ । ಚಿತ್ರಸೇನನು ಅವರ । ಗಾತ್ರಗಳ ಬಿಗಿಯುತ ವಿ । ಚಿತ್ರ ಪಾಶದಲಿ ॥೫॥ ತೆರಳೆ

Scanned by CamScanner

ಸುರಪುರಕಾಗಿ । ತರಳ ಪಾರ್ಥನು ತರಲು । ತೆರಳಿದನು ಕೌರವನು । ಪುರಕೆ ಚಿಂತೆಯುಲಿ ॥೬॥ ಪರರಿಗಹಿತವ ಬಯಸೆ । ಗರಳವಹುದಮೃತವದು । ತರಳರಿರ ಕೇಳಿರೈ । ಮರೆಯುದಿಗಿದನು ॥೭॥ ಎಂದು ಪೇಳುತ ಧರ್ಮ । ನಂದನನು ಮನದಿ ಮು । ಕುಂದನನು ಧ್ಯಾನಿಸಿದ । ನಂದು ವನದೊಳಗೆ ॥೮॥ ॥೨೩॥

ಭಾಮಿನಿ

ಕೇಳು ಜನಮೇಜಯನೆ ಕುರು ಭೂ । ಪಾಲ ಹಸ್ತಿನಪುರದೊಳೊಂದಿನ । ಓಲಗದೊಳಿರುತಿರ್ದ ತನ್ನಯಜ್ಞಾತಿಗಳು ಸಹಿತ ॥ ಕಾಲಕಾಲದಿ ಧ್ಯಾನಿಸುವರನು । ಪಾಲಿಸುವ ಕರುಣಾಳು ಲಕ್ಷ್ಮೀ । ಲೋಲನನು ಧ್ಯಾನಿಸುತ ಬಂದನು ನಾರದನು ಸಭೆಗೆ ॥೧॥ ॥ ೨೪॥

ರಾಗ ಲಾವಣಿ

(ಹೆಣ್ಣಿನ ಸಂಗ ಸಾಕಪ್ಪ ಎಂಬಂತೆ)

ಹರಿನಾರಾಯಣ ಗೋವಿಂದ । ಮುರ । ಹರ ಶ್ರೀ ವರ ಪದ್ಮನಾಭ ಮುಕುಂದ ॥ ನರಹರಿ ವಸುದೇವ ಕಂದ । ಎಂದು । ಸುರಮುನಿ ನಾರದ ಸ್ತುತಿ ಸುತ್ತ ಬಂದ ॥೧॥ ಬಂದ ನಾರದನ ಕಂಡಾಗ । ಮುದ । ದಿಂದ ಲಂಧಕ ಭೂಪನಂದನ ಬೇಗ ॥ ಚಂದದೊಳಾಸನವನ್ನು । ಬ್ರಹ್ಮ । ನಂದನಗೀಯುತ್ತ ನಮಿಸುತ್ತಲವನು ॥೨॥ ಭರಿತಭಕ್ತಿಯೊಳೊಂದಿಸಿದನು । ಪಾದ್ಯಾ । ದ್ಯುರುತರ ಪೂಜೆಯುಗೈದು ಪೇಳಿದನು ॥ ಬರವಕಾಣುತ ತೋಷವಾಯ್ತು । ಭವ । ದುರಿತಂಗಳೆಲ್ಲವು ಪರಿಹಾರವಾಯ್ತು ॥೩॥ ಎಂದು ನಿಂತಿರಲು ಕೌರವನು । ಕಾಣು । ತ್ತೆಂದು ಪೇಳಿದನಾಗ ಸುರಮುನಿವರನು ॥ ಎಂದಿನಂತಿಲ್ಲ ಆಸನವು । ನಸು । ಕಂದಿಕೊಂಡಿಹುದೇನು ಪೇಳು ನಿನ್ನಿರವು ॥೪॥ ॥ ೨೫ ॥

ರಾಗ ಸುರುಟಿ-ಏಕತಾಳ

ಆಲಿಸಿ ಕೇಳ್ ನೀನು । ಸುರಮುನಿ । ಪಾಲನೆ ಪೇಳ್ವುದನು ॥ ಖೂಳರು ಪಾಂಡುಕುಮಾರರುಪದ್ರವ । ಪೇಳಲಿಕಸದಳ ತಾಳಲಸಾಧ್ಯವು ॥೧॥ ಪಾತಕಿ ಖೇಚರನು । ಮಮಬಲ । ವ್ರಾತವನೆಲ್ಲವನು ॥ ಘಾತಿಯಿಂದುರಗಾಸ್ತ್ರದಿ ಬಿಗಿದೊಯ್ಯಲು । ಪಾರ್ಥನು ಸೆಣಸುತ ಸಲಹಿದನೆಮ್ಮನು ॥೨॥ ಮುಂದನುತಿ

Scanned by CamScanner

ಗಳಿಂದ । ದ್ರುಪದನ । ನಂದನೆ ಮುದದಿಂದ ॥ ನಿಂದಿಸಿ ಬಹುಪರಿಯಿಂದಲಿ ನಮ್ಮನು । ಬಂಧಿಸಿರುವ ನೇಣ್ಗಳ ಬಿಡಿಸೀರ್ದಳು ॥೩॥ ದುರುಳರು ಪಾಂಡವರು । ನಮ್ಮಯ । ಅರಿಗಳು ಕೇಳವರು ॥ ತರುಣಿಯು ನಮ್ಮನು ಜರೆಯಲಿಕೋಸುಗ । ಧುರದಲಿ ಬಿಡಿಸಿದರರರೆ ಮದಾಂಧರು ॥೪॥ ಕರುಣಿಸುಪಾಯವನು । ಕುಂತಿಯು । ತರಳರ ಮಾನವನು ॥ ಭರದಲಿ ಖಂಡಿಪ ತೆರದೊಳು ನೀನೆನೆ । ಸುರಮುನಿಪತಿಯಾಲೋಚಿಸುತೆಂದನು ॥೫॥

॥ ೩೩ ॥

ಭಾಮಿನಿ

ಅರಸ ಜನಮೇಜಯನೆ ಕೇಳ್ಕುರು । ವರನು ಪೇಳ್ದುದ ಕೇಳಿ ನಾರದ । ನರುಹಿದನು ಪಾಂಡವರೊಡನೆ ಪಗೆಬೇಡ ನಿನಗೆಂದು ॥ ಪರಿಪರಿಯ ಕಷ್ಟಗಳು ಬರಲದ । ಪರಿಹರಿಸಿ ಹರಿಕಾರ್ಯ್ಯನಾದರು । ಅರುಹುವೆನು ಕೇಳೊಂದುಪಾಯವನೆಂದನಾ ಮುನಿಪ ॥೧॥

ರಾಗ ಕಾಮಚ್-ಆದಿತಾಳ

(ತೆಗೆತೆಗೆ ನಿನ್ನಾ ರಮಣರ್ ಗಿಮಣರ್ ಎಂಬಂತೆ)

ಧರಿಣಿಪ ಕೌರವ ನಾನು । ಅರುಹುದೆಲ್ಲ ಕೇಳು ॥ ತರುಣಿ ಸೌಭದ್ರೆಯು ಮಣಿ । ಪುರದೊಳೈತಂದಿಹಳು ॥೧॥ ತರಿಸು ಕರಿರಥಾಶ್ವಗಳನು ॥ ಭರಿಸು ಕರ್ನಾದ್ಯರನು ॥ ಹರುಷದಿಂದ ತೆರಳೈ ಮಣಿ । ಪುರಕೆ ಬೇಗ ನೀನು ॥೨॥ ತರುಣಿ ಸೌಭದ್ರೆಯೊಳು ಪೇಳು । ಹರುಷದಿ ಬಾರೆಂದು ॥ ಕರುಣದಿಂದಲೊಪ್ಪುದಿರಲು । ಧುರದಿ ತರುವದೆಂದು ॥೩॥ ಹುಡುಗರೀರ್ವರಿಹರು ಒಬ್ಬ ಪೊಡವಿಪಾಲನಹನು । ನುಡಿವೆ ಕೇಳ್ಸುಭದ್ರೆ ತನಯ । ಕಡುಗಲಿ ಅಭಿಮನ್ಯು ॥೪॥ ಕುಟ್ಟಿ ಬಬ್ರುವಹನನನ್ನು । ಕಟ್ಟಿ ಅಭಿಮನ್ಯುವನು । ದಿಟ್ಟತನದಿ ಸತಿಯ ಪಿಡಿದು । ಥಟ್ಟನೈತಾ ನೀನು ॥೫॥

ವಾರ್ಧಿಕ

ಧರಣಿಪತಿ ದುರ್ಯೋಧನಾಖ್ಯ ನೀ ಕೇಳು ನಾ । ನರುಹಿದಂದದಿಗೈಯೆ ಜಯವಹುದು ನಿನಗೆನುತ । ಹರಿಯ ಪಾದಾಂಬುಜವ ನೆನೆಯುತ್ತಲಂಬರಕೆ ತೆರಳಿದಂ ಸುರಮುನಿಪನು ॥ ಕುರುಭೂಪನತಿ ಹರುಷ ಶರಧಿಯೊಳಗೋಲಾಡಿ । ತರಿಸಿದಂ ಸ್ಯಂಧನವ ಕರಿತುರಗ ಮಾರ್ಬಲವ । ಹರುಷದಿಂ

Scanned by CamScanner

ದುಶ್ಶಾಸ ಕರ್ನ ಶಕುನಿಗಳೊಡನೆ ತ್ವರಿತದೊಳಗಿಂತೆಂದನು ॥೧॥

ರಾಗ ಭೈರವಿ-ಏಕತಾಳ

ಭಳಿರೆ ಸುಭದ್ರೆಯಸೀಗ । ಮಮ । ನಿಲಯಕೆ ತರುವೆನು ಬೇಗ । ಕಲಹಕೆ ಬರೆ ಹುಡುಗರನು । ಯಮ । ನಿಲಯಕೆ ಕಳುಹುವೆ ನಾನು ॥೧॥ ಕರುಣಿಪೆನ್ನನುಜೆಯನೆಂದು । ಹಲ । ಧರ ಬಲಃ ಕೋಪದೊಳೆಂದು । ಬರೆದಿರೆ ಪತ್ರವ ನೆನಗೆ । ನಾವ್ । ತೆರಳಲು ದ್ವಾರಕಿಪುರಿಗೆ ॥೨॥ ಹರಿಯು ಚವ್ರತ್ಕೃತಿ ಗೈದ । ಆ । ತರುಣಿಯ ಫಲುಗುಣ ನ್ಯೊದ । ಸುರಮುನಿಪನ ದೆಸೆಯಿಂದ । ಸತಿ । ದೊರಕುವಳೈತನಗೆಂದ ॥೩॥

ಭಾಮಿನಿ

ಅರಸ ಕೇಳ್ ಕೌರವನು ಮನದಲಿ । ಹರುಷದಿಂ ಕರ್ನಾದಿಸುಭಟರೊ । ಳಿರದೆ ಪೌರುಷವಾಡುತಿರಲಾ ಸಮಯದೊಳಗಾಗ ॥ ಸುರನದಿಯ ಸುಕುಮಾರ ನರಿತಾ। ಪರಿಯನೆಲ್ಲವ ಪೇಳ್ದ ಕುಂತೀ । ತರಳರೊಳು ನಿನಗಹಿತ ಬೇಡೆಂದೆನುತ ಕೌರವಗೇ ॥೧॥ ॥ ೪೪ ॥

ರಾಗ ಆಹೇರಿ-ಏಕತಾಳ

(ಕಯ್ಯಾತೋರೋ ಕರುಣೆಗಳರಸನೆ ಎಂಬಂತೆ)

ಬೇಡಬೇಡ ವಿಘ್ನವಹುದು । ನೋಡು ನೋಡಯ್ಯ । ಕಾಡಬೇಡ ಮಹಿಮರೊಳ್ ಕೃಪೆ । ಮಾಡು ಮಾಡಯ್ಯ ॥ಪಲ್ಲ॥ ಸತ್ಯನಿಧಿಗಳಹರು ಪಾಂಡು । ಪುತ್ರರೂ ಸಹಜ । ನಿತ್ಯ ಪೂಜಿಸುವರು ದಾನವ । ಹತ್ಯನ ನಿಜ ॥೧॥ ಮುಕ್ತಿದಾಯಕನ ಪರಮ ಭಕ್ತರ ಕೂಡೇ । ಶಕ್ತಿ ಮೆರೆಯುವುದೇ ನಿನ್ನ । ವ್ಯರ್ಥವಿದುನೋಡೆ ॥೨॥ ತರುಣಿ ಸೌಭದ್ರೇಯ ಮಾನ । ಹರಣಗೈಯಲ್ಕೆ । ಸರಸಿಜಾಕ್ಷ ಬಿಡುವನಲ್ಲ । ಮರುಳಾಟವ್ಯಾಕೇ ॥೩॥ ಹಿಂದೆ ಜೂಜಿನಲ್ಲಿ । ದ್ರುಪದ । ನಂದನೇಯನೂ । ತಂದು ಶೀರೆ ಸುಲಿಯಲು ಗೋ । ವಿಂದ ಕ್ಯಾದನೂ ॥೪॥ ಅರಿತುನೋಡಾ ಪಾಂಡವರಿಗೆ । ಬರುವ ದುರಿತವ । ಪರಿಹರೀಸಿ ಕರುಣದಿಂದ । ಪೊರೆವ ಮಾಧವ ॥೫॥

ಭಾಮಿನಿ

ಸುರನದಿಜನಿಂತುಸುರೆ ಕೌರವ । ಕೆರಳಿ ಹೂಂಕರಿಸುತ್ತಲೆಂದನು । ಅರಿ

Scanned by CamScanner

ತಿಹೆನು ನೀನೆಂದ ನೀತಿಯ ವಚನಗಳನೆನಲೂ ॥ ಅರಸ ಧೃತರಾಷ್ಟ್ರಂಗೆ ಸೂಚಿಸೆ । ತೆರಳಿ ಬಂದಾಎಡೆಗೆ ತನ್ನಯ । ತರಳನಿಗೆ ಬುದ್ಧಿಯನು ಪೇಳುವೆ ನೆನುತಲಿಂತೆಂದ ॥೧॥

ರಾಗ ಸಂವಾದ

(ಕಿಚ್ಚಿಗಿರುವೆ ಮುತ್ತಲುಂಟೆ ಎಂಬಂತೆ)

ಅರಿತೆ ನಿನ್ನ ಮನದ ಇರವ । ತೆರಳಿ ಪೋಪುದೆಲ್ಲಿ ಮಗನೆ । ಬರುವವು ಕೇಡುಗಳ್ ನಿನಗೆ । ಕುರುಕುಲಾದೀಪ ॥೧॥ ಬೇಡ ಬೇಡ ಬರಿದೆ ಭೇದ । ಮಾಡಬೇಡ ಸಹಜರೊಡನೆ । ನೋಡಿ ನಗುವರೆಲ್ಲ ನಿನ್ನ । ಕೋಡಿತನಗಳ ॥೨॥ ಹಿಂದೆ ವನದಿ ಚಿತ್ರಸೇನ । ಗಂಧರ್ವ ನಿನ್ನನು ಬಿಗಿದು । ಚಂದದಿಂದಲೊಯ್ಯೆ ಶಕ್ರ । ನಂದನ ಕ್ಯಾದ ॥೩॥ ಅಂಥ ಉಪಕಾರಗಳ ಮರೆತು । ಪಂಥದಿಂದ ತಹೆಯಾ ನೀನು । ದಂತಿವಾಹನನ ಸುತನ । ಕಾಂತೆಯಳನ್ನು ॥೪॥ ॥೫೪॥

ರಾಗ ಕೇದಾರಗೌಳ-ಅಷ್ಟತಾಳ

ಕರುಣಗಳೀರ್ದಡೆ । ಹರುಷದಿ ಬಿಡಿಸದೆ । ಜರೆಯುವದೇಕೆಮ್ಮನು । ತರುಣಿ ಸೌಭದ್ರೆಯು ತರುವೆನೆಂದೆನುತಲಿ । ಕುರುಭೂಪನುಸುರಿದನು ॥೧॥

ರಾಗ ಸಂವಾದ

ತಿಳಿದುನೋಡು ಹಿಂದೆ ದ್ಯೂತ । ದೊಳಗೆ ಸತಿಯು ಸೀರೆಯನ್ನು । ಸೆಳೆದ ಕಾರಣ ನಿನ್ನ ಮೂ । ದಲಿಸಿದಳಯ್ಯ ॥೫॥

ರಾಗ ಕೇದಾರಗೌಳ-ಅಷ್ಟತಾಳ

ರಾಯಸೂಯಕೆ ಪೋಗಲಲ್ಲಿ ಮೋಸದಿ ಬಿದ್ದು । ನೋಯುತ್ತಲಿರಲು ನಾನು । ತೋಯಜಮುಖಿ ಕಂಡು ನಗುತಿರಲದಕೆ ಉ । ಪಾಯವಗೈದೆ ನಾನು ॥೧॥

ರಾಗ ಸಂವಾದ

ಎಷ್ಟು ಯತ್ನಗೈದರೇನು । ಶ್ರೇಷ್ಠ ಪಾಂಡುಜಾತರನು । ಬಿಟ್ಟುಕೊಡಲಾರನು ಶ್ರೀ । ಕೃಷ್ಣರಾಯನು ॥೧॥

Scanned by CamScanner

ವಾರ್ಧಿಕ

ತರಳ ಕೇಳ್ ನಾನೀಗ ಅರಿತ ಸೀತಿಯು ನಿನಗೆ। ಅರುಹಿದೆನು ಪೋಗದಿರು ಪೇಳ್ದ ವಚನವ ಮೀರಿ। ತೆರಳಲಪಜಯವಹುದು ನಿನಗೆ ಮುಂದೆನಲು ದಿಕ್ಕರಿಸುತಾ ಕುರುಭೂಪನು ॥ ತರಣಿಸುತ ದುಶ್ಶಾಸ ಶಕುನಿಗಳನೊಡಗೊಂಡು । ಕರಿತುರಗ ಸ್ಯಂದನ ಪದಾತಿಗಳ ಸಹಿತ ಮಣಿ। ಪುರಕೆ ಬರಿ ದ್ವಾರಪಾಲಕನೋರ್ವ ನಡಗಟ್ಟಿ ಕೆರಳುತಿಂತೆಂದನವನು ॥೧॥

ರಾಗ ಪಂತುವರಾಳಿ–ಏಕತಾಳ

(ಸಲಾನು ತಕ್ಕೋ ಸಾಲಿಲಿ ದೊರೆಯೇ ಎಂಬಂತೆ)

ಯಾಕೆಮ್ಮಯ ಪುರಕೆನ್ನುತ ಬಂದಿರಿ। ಕಾಕು ಮನುಷ್ಯರಿರಾ। ಪೋಕುತನವ ಮಾಡಲು ಕಾಲ್ಕುರಿವೆನು। ಜೋಕೆಯೊಳ್ ಹಿಂದಕೆ ನಡಿರೀಗ ॥೧॥ ಧೊರೆಯುಹ ಬಭ್ರುವಹನನೊಡನೆ ನಾ। ನರುಹಲು ಕೋಪದಲಿ। ತ್ವರಿತದಿ ನಿಮ್ಮಯ ಶಿರವನು ಅರಿವನು। ತೆರಳಿರಿ ನಿಮ್ಮಯ ಪುರಕೀಗ ॥೨॥

ರಾಗ ಸಾರಂಗ–ಅಷ್ಟತಾಳ

ಎಂದ ಮಾತನು ಕೇಳುತ್ತ। ಕೌರವ ಚರನೊ। ಳೆಂದನು ನಸುನಗುತ್ತ। ಇಂದು ನಾನೆನ್ನಯ ಮನದೊಳಗೀರ್ದುದ। ಚಂದದಿ ಪೇಳುವೆನೂ। ಕೇಳ್ ನೀನು ॥೧॥ ಕರಿಪುರದರಸು ನಾನು। ಕೌರವನೆಂದು। ಕರೆಯುವರೆನ್ನುವನು। ಭರದಿ ನಿನ್ನಯ ಧೊರೆಯೊಡನೀಗಲೊಂದಾಪ್ತ। ವರಮಾತನಾಡಲೆಂದೂ। ಬಂದಿಹೆನಿಂದು ॥೨॥ ಧೊರೆರಾಯುಗರುಹಿ ನೀನು। ನಾನೆಂದುದ। ತ್ವರಿತದಿ ಸಮಯವನು। ಅರಿತು ಬಾರೆನಲಾಗ ಸಭೆಗೈದಿ ದೂತನು। ಅರಸಗೆ ನಮಿಸಿನಿಂದು। ಪೇಳಿದನಂದು ॥೩॥ ಧೊರೆರಾಯ ಕೇಳು ಜೀಯ। ನಾನೆಂಬುದ। ಕರುಣದಿ ಲಾಲಿಸಯ್ಯ। ಹೊರಬಾಗಿಲಿನಲೋರ್ವ ಅರಸ ಬಂದೆನ್ನೊಳು। ಅರಿತು ಬಾ ಸಮಯವೆಂದೂ। ಪೇಳಿದನಿಂದು ॥೪॥ ಕರಿಪುರದರಸನಂತೆ। ಕೌರವನೆಂದು। ಕರೆಯುತ್ತಲಿರುವರಂತೆ। ಇರುವದೊಂದಾಪ್ತ ಆಲೋಚನೆ ನಿಮ್ಮೊಳು। ತೆರಳೆಂದು ಪೇಳುವುದೋ। ಬಾರೆಂಬುದೋ ॥೫॥ ॥೬॥

ಭಾಮಿನಿ

ಅರಸ ಕೇಳೀತೆರದಿ ಚಾರಕ। ನೊರೆದ ನುಡಿಗಳ ಕೇಳಿ ಮಣಿಪುರ।

Scanned by CamScanner

ದರಸ ಹೊರಗೈತಂದು ಹರುಷದೊಳಾಗ ಕುರುನೃಪನ ॥ ಕರೆದುಕೊಂಡೈ ತಂದು ಮಣಿಮಯ। ಉರುತರದ ಪೀಠವನು ಈಯುತ। ಪರಿಪರಿಯ ಕುಶಲ ಗಳನಾಡುತಲಿಂದ ನವನೊಡನೆ ॥೧॥

ರಾಗ ನವರೋಜು-ಏಕತಾಳ

(ಬಂದನು ದೇವರ ದೇವ ಎಂಬಂತೆ)

ಕುರುರಾಯ ಕೇಳ್ ನೀನು । ನಾ । ನರುಹುವದೆಲ್ಲವುಗಳನು । ಪರಿ ವಾರವು ಸಹಿತೀಗಲು ನಮ್ಮಯ । ಪುರಕೈತಂದಿಹುದೇನೆನಲೆಂದನು ॥೧॥ ಮಣಿನಗರಾಧಿಪ ಕೇಳು । ಪಾ । ರ್ಥನ ಸತಿ ಸೌಭದ್ರೆಯೊಳು । ವಿನಯದಿ ಮಾತುಗಳಾಡುವ ಕಾರ್ಯವು। ನನಗಿದೆ ಸಮಯವ ಕೇಳಿ ಬಾರೆಂದೆನೆ ॥೨॥ ಎಂದ ಮಾತನು ಕೇಳಿ। ಮನ। ಗುಂದಿ ಮೌನವ ತಾಳಿ। ಚಂದದೊಳೈತಂದಾ ಸೌಭದ್ರೆಯೊ। ಳೆಂದನು ಕೌರವನೆಂದೀಹ ಮಾತನು ॥೩॥

ರಾಗ ಸಾಂಗತ್ಯ-ರೂಪಕತಾಳ

ಚಿಕ್ಕಮ್ಮ ಲಾಲಿಪುದಿಂದು ಕೌರವ ಬಂದು। ಒಕ್ಕಣಿಸಿದ ಮಾತು ಗಳನು। ಅಕ್ಕರೆಯೊಳು ನಿಮ್ಮೊಳೀಗ ಮಾತಾಡುವ। ದಕ್ಕೆ ಬಂದಿಹೆನೆಂದು ಪೇಳ್ದ ॥೧॥ ಅರಿತ್ಕುಬಾ ಸಮಯವೆಂದೆನುತೆನ್ನ ಕಳುಹಿದ। ಕರುಣಿಸಾ ಮಾತಿ ಗುತ್ತರವ। ತ್ವರಿತದೊಳೆಂದೆನೆ ಕೇಳುತ್ತ ಸುದತಿಯು। ಮರುಗಿ ಮನದೊ ಳಾಲೋಚಿಸುತ ॥೨॥ ದುರುಳ ಕೌರವನು ಪೇಳಿದ ಮಾತನೀಗ ಧಿ। ಕ್ಕರಿ ಸಲು ತರಳರೀರ್ವರನು। ಧುರದಿ ಜೈಸುತಲೆನ್ನ ಕರಕೊಂಡೊಯ್ಯುವನೆಂದು। ಅರುಹಿದಳಾಗಲಿಂತೆನುತ ॥೩॥ ಕಂದಕೇಳೀಗ ನೀ ಅಂಧಕ ಸುತಗೆ ಬಾ। ರೆಂದು ಪೇಳೆಂದೆನಲಾಗ। ಚಂದದಿ ಬಭ್ರುವಾಹನ ಕೌರವನೊಳೆಂದ। ಇಂದು ಮುಖಿಯು ಪೇಳ್ದ ಮಾತ ॥೪॥

ಭಾಮಿನಿ

ವರೆಯಲೀಪರಿ ಕೇಳಿ ಕೌರವ। ರರಸನತಿ ಸಂತೋಷದಲಿ ಮಂ। ದಿ ರದ ಹೊರಬಾಹೆಯಲಿ ಕರ್ಣಾದ್ಯರನು ನಿಂದಿರಿಸಿ ॥ ತರುಣಿ ಸೌಭದ್ರೆಯನು ಕಾಂಬುರು। ತರದ ಹರುಷದಿ ಬಂದನಾ ಕುರು। ವರನು ಆಕೆಯ ಸಮ್ಮುಖದಿ ಮಂಡಿಸಿದನಾಕ್ಷಣದಿ ॥೧॥

Scanned by CamScanner

ರಾಗ ಕಲ್ಯಾಣಿ-ಆದಿತಾಳ
(ತಮ್ಮ ಕೇಳು ಬಾಲಾರೀರ್ವರು ಎಂಬಂತೆ)

ಬಂದೀರ್ಪ ಕೌರವನ ಕಾಣುತ್ತ । ಮನಸಿನೊಳ । ಇಂದುಮುಖಿಯು ಭೀತಿ ತಾಳುತ್ತ । ಎಂದಳು ಭಾನುಮತಿ ಕ್ಷೇಮವೆ । ಗಾಂಧಾರಿ ಕುಂತಿ । ಅಂಧಕಾದ್ಯರುಗಳು ಕುಶಲವೆ ॥೧॥ ಸರಸೀಜನೇತ್ರೇ ಕೇಳೆಮಗೆ । ಗಾಂಧಾರಿ ಕುಂತಿ । ತರುಣಿಮಣಿ ಭಾನುಮತಿ ದೇವಿಗೆ । ಪರಿವಾರಂಗಳೆಲ್ಲ ಕುಶಲವು । ಅಂಧಕ ಭೂಪ । ಸರುವ ಪ್ರಜೆಗಳಿಂಗೆ ಕ್ಷೇಮವು ॥೨॥ ಇಂತೆಂದ ನುಡಿಯ ಲಾಲಿಸಿ । ಪೇಳಿದಳಾಗ । ಕುಂತಿಯಾತ್ಮಜರನು ಸೋಲಿಸಿ । ಕಾಂತಾರಕಟ್ಟಿದೆನೆನ್ನುತ್ತಾ । ಒಡಲೊಳು ಬಲು । ಚಿಂತೆಯಿಂದ ಕೃಪೆಯತಾಳುತ್ತಾ ॥೩॥ ಧರಣೀಯೊಳರ್ಧವ ಮುದದೊಳು । ನಮ್ಮವರನ್ನು । ಕರೆಸಿಯವರಿಗಿತ್ತು ದಯದೊಳು । ಪೊರೆಯೂವದೆಂದೆಣಿಸಿ ಮನದೊಳು । ಬಂದಿಹೆಎಂದು । ಹರುಷಗೊಂಬೆ ಮನದೊಳೆಂದಳು ॥೪॥ ತರುಣಿ ಕೇಳೆ ಪಾಂಡುಸುತರನ್ನು । ಸಂತೋಷದಿಂದ । ಬೆರಸಿದ್ದೆನರಣ್ಯಕ್ಕೆ ನಾನು । ಕರುಣದಿಂದ ಪೊರೆವೆ ನಿನ್ನನು । ಎನ್ನೊಡನೀಗ । ತೆರಳಿಬರುವುದೆಮ್ಮ ಪುರಕಿನ್ನು ॥೫॥ ಶ್ರೇಷ್ಠವಾದ ಶಶಿ ಕುಲದಲ್ಲಿ । ಭೂಪತಿ ಧೃತ । ರಾಷ್ಟ್ರನರಸಿ ಗಾಂಧಾರಿಯಲ್ಲಿ । ಪುಟ್ಟಿ ಪರರ ಸತಿಯರೊಡನೆ । ಮನವಳುಕಃವ । ದಿಷ್ಟವೇನು ನಿನ್ನ ಮನಕೆನೆ ॥೬॥ ಎನಲಾ ಮಾತ ಕೇಳಿ ರೋಷದಿ । ಪೇಳಿದನಾಗ । ವನಿತೆ ಕೇಳ್ ನೀನೀಗ ವೇಗದಿ । ವಿನಯದಿಂದೆನ್ನೊಡನೆ ಬರದಿರೆ । ಕೊಂಡ್ಯೊವೆನೆನ್ನ । ಘನಪೌರುಷವ ತೋರಿನಾಖರೆ ॥೭॥

ವಾರ್ಧಿಕ

ಜನಮೇಜಯಾಖ್ಯ ಭೂಪಾಲ ಲಾಲಿಸು ಕೌರ । ವನು ಪೇಳ್ದ ನುಡಿಯ ಕೇಳುತ ಮನದಿ ಚಿಂತಿಸುತ । ವನಿತೆ ಸೌಭದ್ರೆ ಮಾರುತ್ತರವ ಕಾಣಿಸದೆ ಘನ ಶೋಕದಿಂದೀರ್ದಳು ॥ ಜನಪ ಕೇಳೆನಗೋರ್ವ ಧುರಧೀರ ವರನೀರ್ಪ । ನನುವಿನೊಳಗಾತನಂ ತ್ಯಜಿಸಲೋಸುಗ ನಾನು । ವಿನಯದಿಂ ಹಿಂದುಮುಂದಿನ ಕಷ್ಟಗಳನೆಣಿಸಿ ನಿನಗೆಂಬೆನುದಯಕೆನಲು ॥೧॥ ॥೮೩॥

ರಾಗ ಕೇದಾರಗೌಳ-ಅಷ್ಟತಾಳ

ಎನಲಾ ಮಾತನು ಕೇಳಿ । ಮನದಿ ತೋಷವ ತಾಳಿ । ಜನಪತಿ ಕೌರ

Scanned by CamScanner

ವನು । ವಿನಯದಿ ಹೊರಗೈದಿ । ಜನಜಾದ್ಯರೊಡನೆಂದ । ಇನಿತಾದ ಸಂಗತಿಯ ॥೧॥ ಜನಪತಿ ಬಭ್ರುವಾ । ಹನನಾಗ ತ್ವರಿತದಿ । ಘನತರ ಬೀಡಿಕೆಗೆ । ಜನಪತಿ ಕೌರವ । ನನು ಕಳುಹುತ್ತಲಿ । ವಿನಯದಿಂದಿರುತೀರ್ದನು ॥೨॥ ಇತ್ತ ಕೌರವ ತನ್ನ । ಮಿತ್ರರೊಡನೆ ತೋಷ । ವೆತ್ತು ಬೀಡಿಕೆಯೊಳಿರೆ । ಅತ್ತ ಸೌಭದ್ರೆಯು । ಚಿತ್ತದಿ ಕಳವಳಿ । ಸುತ್ತಲಿ ಮರುಗಿದಳು ॥೩॥

ರಾಗ ಸಾವೇರಿ-ಆದಿತಾಳ

ಹರಹರ ವಿಧಿವಶವೇ । ಕೌರವನೆಂಬ । ದುರುಳಗಿನ್ನೇನ ಮಾಡುವೆ । ಧುರಧೀರ ನೆನ್ನ ವರನೇ । ಇರಲೆನಗಿಂಥ । ಪರಿಯ ಕಷ್ಟವೆ ಶಿವನೇ ॥೧॥ ವೀರನೆನ್ನಯ ವರನು । ಸಂಗರದಿ ಕಾ । ಮಾರಿ ಮಹೇಶನನು । ಹೋರಿ ಪಾಶುಪತವನು । ಪಡೆದಿಹ ಧುರ । ಧೀರ ಧನಂಜಯನು ॥೨॥ ಅಂಥಾ ಪರಾಕ್ರಮನು । ಪಾರ್ಥನ ನಿಜ । ಕಾಂತೆಯಾದೆನ್ನುವನು । ಪಂಥದಿ ಕೌರವನು । ಕೊಂಡೊಯ್ಯುವನು । ಎಂತು ಸೈರಿಸಲಿ ನಾನು ॥೩॥ ಯಾಕೆನ್ನ ಕರೆದ್ಯ ತಂದೆ । ಚಿತ್ರಾಂಗದೆ । ಯಾಕೆ ನಿನ್ನೊಳು ನಾಬಂದೆ । ಆ ಖೂಳ ನ್ನೊಯ್ವನೆನ್ನನು । ಕಾಯುವದೆನ್ನ । ರಾಕೇಂದುಧರನೆ ನೀನು ॥೪॥ ಯಾರೆನ್ನ ಕೇಳುವರು । ಈ ಕಷ್ಟದಿ । ಯಾರೆನ್ನ ಕಾಯುವರು । ಬೇರಿಲ್ಲ ಮತವೆನಗೆ । ಪೇಳುವೆನಾ ಮು । ರಾರಿ ಎನ್ನಗ್ರಜಗೇ ॥೫॥

ಭಾಮಿನಿ

ಸಿರಿಯರಸ ಮಾಧವ ಜನಾರ್ಧನ । ನರಹರಿಯೆ ಗೋವಿಂದ ಮುರಹರ । ದುರಿತಹರ ಕರುಣಾರ್ಕ ಕೋಟಿ ಪ್ರಕಾಶ ಶ್ರೀಧರನೇ ॥ ದುರುಳ ಕೌರವ ನೆನ್ನ ಮಾನವ । ಪರಿಭವಿಸಲ್ಕೆ ತಂದಿಹನು ನೀ । ಕರುಣದಿಂ ಸಲಹೆನಲು ಕೇಳುತ ಪೇಳ್ದಳಾಲೂಪಿ ॥೧॥

ರಾಗ ಕಾಫಿ-ಅಷ್ಟತಾಳ

(ಆದರಿಸಯ್ಯ ಸಂಪನ್ನ ಎಂಬಂತೆ)

ಸರಸಿಜನೇತ್ರೆ ನೀ ಕೇಳು । ನೀನು । ಕರಗಿ ದುಃಖಿಪುದೇಕೆ ಪೇಳುವೆ ತಾಳು । ಧುರಧೀರನಿಹನೆನ್ನ ಪಿತನು । ನಾನು । ಕರೆಸೆ ಬಹನು ತ್ವರಿತದಿ ಮಹೋರಗನು ॥೧॥ ಅರುಹಲಾತನಿಗೆ ಕೌರವನ । ಶಿರ । ವರಿದು ನಿನ್ನಿಚ್ಛೆಯ

Scanned by CamScanner

ಸಲಿಸೆ ಉರಗನ । ತ್ವರಿತದಿ ಕರೆಸುವ ಪಿತನ । ಎಂದು । ಸರಸಿಜಮುಖಿ ಲೂಪಿ ಪೇಳ್ದಳೀಹದನ ॥೨॥ ಎಂದು ಧೈರ್ಯವ ಪೇಳಿ ಬೇಗ । ತನ್ನ । ತಂದೆಯು ಕರೆದಳು ಇಂತೆನುತಾಗ । ಮಂದರಗಿರಿಗೆ ನೇಣಾದ । ಉರ। ಗೇಂದ್ರನೆ ಭಜಿಸುವೆ ನಿನ್ನಯ ಪಾದ ॥೩॥ ಹರಿಗೆ ಶಯನಿಸೆ ವೈಯಿತ್ತೆ । ಈ । ಧರಣಿಯ ಭಾರವ ಶಿರದಲ್ಲಿ ಪೊತ್ತೆ । ಹರುಷದಿ ಭಜಿಸುವೆ ನಿನ್ನ । ಬಂದು । ಕರುಣದಿ ಪೊರೆಯುವದೆನ್ನ ಸಂಪನ್ನ ॥೪॥ ॥ ೯೬ ॥

ಭಾಮಿನಿ

ಧಾರುಣಿಪ ಕೇಳಿಂತು ಲೂಪಿ ಮ । ಹೋರಗನ ನೆನೆಯಲ್ಕೆ ವಾಸುಕಿ । ಭೋರಿಡುತ ಲೈತಂದು ಆಕೆಯ ಸರಿಸದಲಿ ನಿಂದು ॥ ನಾರಿಮಣಿ ನೀ ಮನದೊಳೆನ್ನನು । ಭೂರಿಧ್ಯಾನವ ಗೈದುದ್ಯಾತಕೆ । ಭೋರನುಸುರೆಂದೆನಲು ನಮಿಸುತ ಪೇಳ್ದಳಾಲೂಪಿ ॥೧॥

ರಾಗ ಕಾಂಭೋದಿ-ತ್ರಿವುಡೆತಾಳ
(ಯಾರಿಗಿಷ್ಟುಪಚಾರವ್ಯೆ ಎಂಬಂತೆ)

ಉರಗಾಗ್ರಣಿಯೆ ಲಾಲಿಸು । ನಾನೆಂಬುದ । ಕರುಣದಿ ದಯವಿರಿಸು । ದುರುಳ ಕೌರವರೊಡನೆ ಕುಂತೀ । ತರಳರೈವರು ಸೋತು ದ್ಯೂತದಿ । ಚರಿಸುತಿರೆ ವಿಪಿನಾಂತರಾಳದಿ । ತೆರಳಿದೆನು ನಾ ನನುಜೆ ಸುತಸಹ ॥೧॥ ತರುಣೀ ಸೌಭದ್ರೆಯನು । ನಮ್ಮಯ ಪುರ । ಕಿರದೆ ನಾಕರೆತಂದೆನು । ಕುರುನೃಪನು ಬಂದೀಗ ಲೀಕೆಗೆ । ತೆರಳು ತನ್ನಯ ಪುರಕೆನುತ್ತಲಿ । ಭರಿತ ಸೇನೆಯ ಕೂಡಿ ಬಂದಿಹ । ಕರುಣದಿಂ ರಕ್ಷಿಪುದು ನೀನೆನೆ ॥೨॥

ರಾಗ ಮಾರವಿ-ಏಕತಾಳ

ಸುತೆ ಇಂತೆಂದುದ ಕೇಳುತ ಉರಗಾ । ಪತಿ ನೇತ್ರದಿ ಖಿಡಿಯ । ಕ್ಷಿತಿಯೊಳು ಕೆಡಹುತ ಭೋರ್ಗರೆದೆಂದನು । ಸುತೆಯೊಡನಿಂತೆನುತ ॥೧॥ ಬಿಡು ಬಿಡು ಮನದಲಿ ಚಿಂತಿಪುದ್ಯಾತಕೆ । ಪೊಡವಿಪ ಕೌರವನ । ಧಡಿಗತನವ ನಾ ನಿಲಿಸುವೆ ಕ್ಷಣದಲಿ । ತಡಿ ತಡಿ ಎಂದೆನುತ ॥೨॥ ದುಷ್ಟನ ಮರ್ಧಿಸೆ ಫಣಿಪಾಶವನಾ । ನಿಷ್ಟದೊಳೀಯುವೆನು । ಧೃಷ್ಟನು ಮುಂದಕೆ ಬರಲೀ ಪಾಶವ । ನಿಟ್ಟುರವನ ಬಳಿಗೆ ॥೩॥ ಮುರಿಮುರಿ ರಟ್ಟೆಯ ಬಿಗಿಯುತಲಾತನ । ಗರಳದಿ

Scanned by CamScanner

ದಹಿಸುವುದು । ಸರಸಿ ಜನಾಭನ ಕರುಣಗಳಿಂಲೀ । ತೆರದಿಂದಾಗುವುದು ॥೪॥ ಜಡಜಾಂಬಕಿ ಕೇಳೀ ಫಣಿಪಾಶವ । ಬಿಡಿಸರಿ ಪಾಂಡವರ । ಮಡದಿಯು ದ್ರೌಪದಿ ಬಿಡಿಸಲು ಕ್ಷಣದಲಿ । ತಡೆಯದೆ ಪೋಗುವುದು ॥೫॥ ತರಣಿ ಸುತಾದ್ಯರು ಧುರಕೈತರ ಲೀ । ವೀರು ಹುಡುಗರ ನಿಲಿಸು । ಹರುಷದೊಳೀ ಯುವೆ ನೇಳಕ್ಷೋಹಿಣಿ । ಉರಗರ ಸತ್ವವನು ॥೬॥ ॥೧೦೫॥

ವಾರ್ಧಿಕ

ಧರಣಿಪತಿ ಲಾಲಿಸೀಪರಿಯು ಧೈರ್ಯವ ಪೇಳಿ । ತೆರಳಿದಂ ವಾಸು ಕಿಯು ತನ್ನ ಪುರವರಕಾಗಿ । ತರಣಿಯಸ್ತಮಿಸಲೆಲ್ಲರು ಮಜ್ಜನಂ ಗೈದು ಶಯನಿಸಿದರರ್ಥಿಯಿಂದ ॥ ಮರುದಿವಸದಿನಪನುದಿಸಲ್ಕಿತ್ತ ಕೌರವಂ । ಪರಿ ಮಳಿಪ ಸೌಗಂಧಕಸ್ತೂರಿ ಚಂದನವ । ಧರಿಸುತ್ತಲೈತಂದು ತರುಣಿ ಸೌಭದ್ರೆ ಯೊಳು ಹರುಷದೊಳಗಿಂತೆಂದನು ॥೧॥

ರಾಗ ಕಾಂಭೋದಿ-ಆದಿತಾಳ

(ಇಂಥಾ ಮೂತ್ಯಾಕೆಂಬೆ ಪಾರ್ಥ ಎಂಬಂತೆ)

ತರುಣಿ ಏಳೇಳೇಗ ನಿನ್ನ । ಅರುಹಿದಂತೆ ಎನ್ನೊಡನೇ । ಹರುಷದಿಂದ ಬಾಬಾರೆಮ್ಮ । ಪುರಕೆತ್ವರಿತದಿಂದ ನೀನು ॥೧॥

ರಾಗ ಕೇದಾರಗೌಳ-ಅಷ್ಟತಾಳ

ಧರಣಿಪ ಕೇಳ್ ನೀನು ವರನನ್ನು ತ್ಯಜಿಸೆಂದು । ಅರುಹುವದಿದು ನಿನಗೆ । ಸರಿಯಲ್ಲ ನೀನಿದನರಿತುಕೊ ಮನದೊಳು । ತೆರಳು ನಿನ್ನಯ ಪುರಕೇ ॥೧॥

ರಾಗ ಕಾಂಭೋದಿ-ಆದಿತಾಳ

ಬರಿದೆ ಪೌರುಷಂಗಳೇಕೆ । ಚರಿಪನು ನಿನ್ನರಸ ವನದಿ । ಧರಣಿಪಾಲ ನಹೆನು ನಾನು । ಬರಿದೆ ಆಲೋಚಿಸುವುದೇನು ॥೧॥

ರಾಗ ಕೇದಾರಗೌಳ-ಅಷ್ಟತಾಳ

ಕ್ಷಿತಿಪ ಕೇಳೆನ್ನಯ ಪತಿಯು ವನದೊಳಿರೆ । ಜೊತೆಯೊಳಗಿರುವೆ ನಾನು ।

Scanned by CamScanner

ಪತಿವ್ರತ ಗುಣಗಳ ನನುಕರಿಸುವೆನೀಗ । ಮತಿಹೀನ ಹೋಗೆಂದಳು ॥೧॥

ರಾಗ ಕಾಂಭೋಧಿ ಆದಿತಾಳ

ಬಲ್ಲೆನೂಪತೀವ್ರತವನು । ಫುಲ್ಲನಯನೆ ದ್ರೌಪದಿಯನು । ವಲ್ಲಭರೈವರು ಲಜ್ಜೆ । ಇಲ್ಲದೆ ಆಳುವರು ನೋಡು ॥೧॥

ರಾಗ ಕೇದಾರಗೌಳ-ಅಷ್ಟತಾಳ

ಧರಣಿಪ ಕೇಳ್ ಪೂರ್ವಭವದ ಶಾಪವನನು । ಕರಿಪರು ಪಾಂಡವರು । ಮರುಳಾಟಗಳಬಿಟ್ಟು ತೆರಳು ಪಾಂಡವರಿಗೆ । ಶಿರವ ನೀಯದಿರು ನೀನು ॥೧॥

ರಾಗ ಭೈರವಿ-ಝಂಪೆತಾಳ

ಬಿಡು ಬಿಡೆಲೆ ನೀಪೇಳ್ದ । ಬಡಿವಾರಗಳ ಬಲ್ಲೆ । ಬಡಪಾಂಡು ಜಾತರಿಗೆ ಬೆದರಿ । ನಡೆಯೆನೆಂದಿಗು ಧಿಟವು । ಮೃಡನು ಧುರಕೈತಂದ । ರೊಡನೆಗೆಲ್ಲುವೆ ನವನ ಧುರದಿ ॥೧॥

ರಾಗ ಕೇದಾರಗೌಳ-ಅಷ್ಟತಾಳ

ಅರಿತೀರ್ಪೆ ನಿನ್ನಯ ಧುರಪರಾಕ್ರಮ ಹಿಂದೆ । ಗುರು ಕಾಣಿಕೆಯ ನೀಯಲು । ಧರಣಿಪ ದ್ರುಪದನೋಳ್ ಧುರಗೈದು ಜೀವವ । ಹರುಷದಿ ಸಲಹಿಕೊಂಡೆ ॥೧॥

ರಾಗ ಭೈರವಿ-ಝಂಪೆತಾಳ

ಮುಚ್ಚು ಬಾಯನು ಎನ್ನ । ಹೆಚ್ಚಿನ ಪರಾಕ್ರಮಕೆ । ಮೆಚ್ಚಿ ಹಲಧರ ನಿನ್ನ ನೀವ । ಇಚ್ಛೆಯಿರೆ ಮೋಸದೊಳು । ಹುಚ್ಚುತನದೊಳು ನರಗೆ ಸಚ್ಚಿದಾನಂದ ನಿತ್ತಹನು ॥೧॥ ॥೧೧೫॥

ರಾಗ ಕೇದಾರಗೌಳ-ಅಷ್ಟತಾಳ

ಧುರಪರಾಕ್ರಮ ನಿನ್ನೊಳಿರುವ ದೆನುತಪರ । ತರುಣಿಯರೊಳು ಮನವ । ನಿರಿಸೆ ನಿನ್ನನು ಘನ ನರಕದೊಳೆಮ ಭಟ । ರುರುಳಿಪರೆಲವೊ ಕೇಳು ॥೧॥

ರಾಗ ಭೈರವಿ-ಝಂಪೆತಾಳ

ಪರದೊಳಾಗುವ ಕಷ್ಟ । ವರಿತೀರ್ಪೆಯಾ ನೀನು । ಬರಿದ್ಯಾತಕೀ

ಮಾತನೆಂಬೆ । ಪರಜನ್ಮದೊಳಗಾಹ । ದುರಿತಕ್ಕೆ ಬೆದರದಿರು । ಭರದಿ ಬಾರೆನ್ನೊಡನೆ ನೀನು ॥೧॥

ರಾಗ ಕೇದಾರಗೌಳ-ಅಷ್ಟತಾಳ

ಹಿಂದೆ ಜನಕ ಭೂಪ । ನಂದನೆಯನು ನಶ । ಕಂಧರತರಲಾತಗೆ । ಬಂದಿಹ ಭವಣೆಯ । ಚಂದದಿ ತಿಳಿದುನೀ । ಬಂದಂತೆ ಹೋಗೆಂದಳು ॥೧॥

ರಾಗ ಭೈರವಿ-ಝಂಪೆತಾಳ

ಧರಣಿಜೆಯಪತಿ ರಾಮ । ಧುರಧೀರನಹನು ದಶ । ಶಿರನ ಕಂಠವ ಕತ್ತರಿಸಿದ ॥ ತರುಣಿ ಕೇಳೆಲೆ ನಿನ್ನ । ವರನ ಮಾತಿರಲೆನ್ನ । ಧುರದಿ ಗೆಲ್ಲುವ ರ್‍ಯಾರು ಜಗದಿ ॥೧॥

ರಾಗ ಕೇದಾರಗೌಳ-ಅಷ್ಟತಾಳ

ಬಲ್ಲೆ ಬಲ್ಲೆನು ನಿನ್ನ ಸಹಸನ್ಯೈಮಿಷ ವನ । ದಲ್ಲಿ ತೋರೀರ್ಪೆ ನೀನು । ಮಲ್ಲ ಗಂಧರ್ವನಿ । ವ್ಮೆಲ್ಲರ ಬಿಗಿದೊಯ್ಯ । ಲೆಲ್ಲಡಗಿತು ಶೌರ್ಯವು ॥೧॥

ರಾಗ ಭೈರವಿ-ಝಂಪೆತಾಳ

ವನಿತೆ ನೀಸೊಕ್ಕಿ ಮಾತಾಡದಿರು ಎನ್ನೊಡನೆ । ಘನ ವೇಗದಿಂದ ಬಾರೆಲೆಗೆ । ವಿನಯದಿಂ ಬಾರದಿರಲೆಳದ್ಯೊವೆ ನಿನ್ನನೆಂ । ದೆನುತಲಾರ್ಭಟಿಗೊಡುತಲುಸುರೆ ॥೧॥

ರಾಗ ಕೇದಾರಗೌಳ-ಅಷ್ಟತಾಳ

ಎಂದ ಮಾತನು ಕೇಳಿ ಚಂದಿರಾನನೆ ಮುದ । ದಿಂದ ಲೇಣಿಯ ನೇರುತ್ತಾ । ಚಂಧದಿಂದುಪ್ಪರಿಗೆಗೆ ಪೋಗಿ ಕ್ರೋಧದೊ । ಳೆಂದಳು ಕೌರವಗೆ ॥೧॥ ಪರಮಪಾತಕಿ ಕೇಳು ತರಣಿ ಚಂದ್ರಾಧ್ಯರೀ । ಧರೆಯೊಳು ಚರಿಸಿದರೂ । ಬರಲಾರೆ ಮುಂದ ಕೈತರಬೇಡಪಾಮರ । ಗರುವ ನಿಲ್ಲಿಸುವೆ ನೋಡು ॥೨॥

ರಾಗ ಭೈರವಿ-ಅಷ್ಟತಾಳ

ಎನಲಾ ಮಾತನು ಕೇಳುತ್ತಾ । ಕೌರವ ಭೂಪ । ಘನರೋಷವನು

ತಾಳುತ್ತಾ । ವನಿತೆ ಕೇಳೆಲಿ ನಿನ್ನ ನೆಳದ್ದೊವೆ ಕಾಯುವ । ಮನುಜರ ಕೆರೆ ಸೆಂದನು ॥೧॥ ಎಂದು ರೋಷಾವೇಷದ ಏಣಿಯನೇರ । ಲೆಂದು ಕೌರವ ಮುದದಿ । ಬಂದು ಏಣಿಯನೇರುತ್ತೈತರಲಾಕ್ಷಣ । ಇಂದು ಮುಖಿಯು ಕಾಣುತ್ತಾ ॥೨॥ ॥೧೨೫॥

ಭಾಮಿನಿ

ಹರಹರಾ ಇನ್ನೇನ ಗೈಯುವೆ । ದುರುಳನೈತಹನೆನುತ ಸುದತಿಯು । ನರ ಹರಿಯೆ ಗೋವಿಂದ ಮಾಧವ ಕರುಣಸಾಗರನೇ ॥ ಮುರಮಥನ ಕೇಶವ ಜನಾರ್ಧನ । ಕರುಣದಿಂ ರಕ್ಷಿಪುದು ನೀನೆನು । ತುರಗಪಾಶವನಿಟ್ಟಳಾ ಕೌರವನ ಬಳಿಗಾಗಿ ॥೧॥

ರಾಗ ಮಾರವಿ-ಏಕತಾಳ

ಗರಳವ ಸುರಿಸುತ ಬರುತಿಹ ಪಾಶವ । ಪರಿಕಿಸುತಾ ನೃಪನು । ತರುಣಿಯೆ ಭಾಪುರೆ ಧುರಕ್ಕೈತಂದೆಯ ಪರಿಕಿಸು ಸಾಹಸವ ॥೧॥ ಕೆರಳುತ ಕೌರವರರಸನು ಗರ್ಜಿಸಿ । ಗರುಡಾಸ್ತ್ರವ ಬಿಡಲು । ಉರಗ ಮಂತ್ರಾಸ್ತ್ರವ ತರಿಯಲಿಕಾಗದೆ । ಬರುತಿರಲೀಕ್ಷಿಸುತಾ ॥೨॥ ತರತರದಸ್ತ್ರವ ನೆಸೆಯಲು । ಪಾಶವು । ತರಿದಿಕ್ಕುತಲದನು । ಧರಣಿಪನನು ಏಣಿಗೆ ಬಿಗಿದಿಕ್ಕಿತು । ಮುರಿ ಮುರಿ ರಟ್ಟೆಯನು ॥೩॥

ವಾರ್ಧಿಕ

ಧರಣಿಪತಿ ಲಾಲಿಸೈ ಕೌರವನು ಏಣಿಯಲಿ । ಕರವಬಿಗಿವಡೆದಿರಲು । ತರುಣಿಮಣಿ ಸೌಭದ್ರೆ । ಹರುಷದಿಂ ನಡೆತಂದು ಪರಮ ಸಹಸಿಯೆ ನಿನ್ನ ಗರುವವನು ತೋರಿಸೆನುತ ॥ ಪರಿಪರಿಯ ರೀತಿಯಲಿ ಮೂದಲಿಸುತೀಪರಿಯೊಳೆರಡು ದಿನ ಕಳೆಯಲ್ಕೆ ಇತ್ತಲಾ ದುಶ್ಯಾಸ । ತರಣಿಸುತ ಸೌಬಲಾದ್ಯರು ಮನದೊಳಾಲೋಚನೆಯ ಗೈದರೇನೆಂಬೆನು ॥೧॥

ರಾಗ ಸಾಂಗತ್ಯ-ರೂಪಕತಾಳ

ಏನಿದು ಕೌರವರರಸನು ಪೋಗಿಹ । ಮಾನಿನಿಯನು ತರಲೆಂದು । ನ್ಯೂನತೆ ಬಂದುದೇನೆರಡು ದಿವಸವಾಯಿ । ತೇನು ಕಾರಣ ಬರಲಿಲ್ಲ ॥೧॥

Scanned by CamScanner

ತಿಳಿಯುತೆಮ್ಮಯ ಮನದೊಳಗೀಗ ಸೌಭದ್ರೆ। ಲಲನೆಯನೊಡಗೂಡಿ ಮುದದಿ। ವಲವಿಂದ ಕಾಮಿಸುತಿಕಿಮೋಹದೊಳಗಿಹ।ಇಳೆಯಧಿಪನು ಮೋಹದಿಂದ ॥೨॥ ಎಂದು ಈ ಪರಿಯಿಂದ ಮಾತನಾಡುತಲಿರೆ । ಬಂದು ಬಭ್ರುವಾಹನಾಖ್ಯ । ನೆಂದನು ವಿನಯದಿ ಅಂಧಕಭೂಪನ । ನಂದನನಿಗೆ ಬಂದ ವಿಧಿಯ ॥೩॥ ದುರುಳ ಕೌರವನು ಗರ್ವದಿ ಬಂದು ಸೌಭದ್ರೆ । ತರುಣಿಯ ನ್ಯೊವೆನೆಂದೆ ನಲು । ಸರಸಿಜಾಕ್ಷಿಯು ತನ್ನ ಜೀವಾಭಿಲಾಸೆಗೆ । ಉರಗಪಾಶದಿ ಬಿಗಿದಿಹಳು ॥೪॥ ಎನಲಾ ಮಾತನು ಕೇಳಿ ಕನಲುತ್ತ ತರಣಿಜ । ಘನರೋಷವನು ತಾಳುತ್ತಾಗ । ಬಣಗು ಭೂಪಾಲ ಕೇಳೆಮ್ಮಯ ಜನಪನ । ಘನವೇಗ ಬಿಡಿಸಿ ತಾರೆಂದ ॥೫॥ ಯಾರು ಬಿಚ್ಚಲು ಬಿಡಲಾರದಾ ಪಾಶವು । ಘೋರ ಆರ್ಭಟಿ ಗೊಡುತಿಹುದು । ಸೂರಿಯಾತ್ಮಜ ನೀನೆ ಬಿಡಿಸೆಂದು ಪೇಳಲು । ಆರುಭಟಿಸು ತೆಂದನಾಗ ॥೬॥ ಭೃಷ್ಟಭೂಪಾಲ ಕೇಳೆಮ್ಮಯ ಭೂಪನ । ಥಟ್ಟನೆ ಬಿಡಿಸಿ ತಾರದಿರೆ । ಕುಟ್ಟಿ ನಿನ್ನನು ಕಾಲನೂರಿಗೆ ಕಳುಹುವೆ । ಥಟ್ಟನೆ ಧುರಕೆ ಬಾರೆಂದ ॥೭॥

ಭಾಮಿನಿ

ಆರುಹಲೀಪರಿ ಕೇಳಿ ಕ್ರೋಧದಿ । ಧರಣಿಪನು ಬಲಸಹಿತ ಬಂದಾ । ಆರಿಗಳಿದಿರಲಿ ನಿಂದು ಹರಿನಾದವನು ಗೈಯುತಿರೆ ॥ ಭರದಿ ಮಣಿಪುರದರಸ ಸಚಿವನು । ಕೆರಳಿತನ್ನಯ ಚಾಪವನು ಝೇಂ । ಕರಿಸುತಾಕ್ಷಣ ಶಕುನಿಗಿದಿ ರಾಗುತ್ತಲಿಂತೆಂದ ॥೧॥

॥೧೩೪॥

ರಾಗ ಶಂಕರಾಭರಣ–ಮಟ್ಟೆತಾಳ

ಆರು ನಿನ್ನ ಪೆಸರದೇನು । ಶೂರನಹುದು ಭಾಪು ಭಳಿರೆ । ಸಾರಿ ಬಂದು ದ್ಯಾತಕಿಲ್ಲಿ । ಘೋರನುಸುರೆಲಾ ॥೧॥ ನುಡಿವೆ ಕೇಳು ಗಾಂಧಾರ। ಪೊಡವಿ ಪಾಲನಹೆನು ನಾನು । ಸಡಗರದಿ ಸುಯೋಧನಾಖ್ಯನೊಡನೆ ಬಂದೆನು ॥೨॥ ತಿಳಿಯುತೀಗ ಪಾಂಡು ಸುತರ । ಗೆಲಿಮು ಕಪಟದಿಂದ ಲೆಮ್ಮ । ನೆಲೆಯ ನರಿಯದೀಗ ಬಂದೆ । ಭಳಿರೆ ಭಾಪುರೆ ॥೩॥ ಇಸಿತು ಪೇಳ್ದ ಮಾತ ಕೇಳಿ । ಮನದಿ ಕ್ರೋಧಗೊಂಡು ಶಕುನಿ । ಕನಲುತಾಗ ಲೆಚ್ಚನೆಂಟು । ಶರವನಾಕ್ಷಣ ॥೪॥ ಬರುವ ಶರವ ಕಂಡು ಪ್ರತಿಯು । ಶರವನೆಸೆದು ಮಧ್ಯ ಪಥದಿ । ತರಿ ವುತಾ ಸುಬುದ್ಧಿಸಿಂದ । ಹರಿಯುನಾದದಿ ॥೫॥ ಉರಿಯನುಗುಳುತಾಗ

Scanned by CamScanner

ಶಕುನಿ । ಪರಮ ಕ್ರೋಧದಿಂದಲೆಚ್ಚ । ದುರುಳ ನಿಲ್ಲೆನುತ್ತನೇಕ । ಶರವ ನಾಕ್ಷಣ ॥೬॥ ಕಿಡಿಯನುಗುಳಿ ಬರುವ ಶರವ । ಕಡಿದು ಬಿಸುಡುತಾ ಸುಬುದ್ಧಿ । ಯೊಡನೆ ಕ್ರೂರ ಶರವನೆಚ್ಚ । ಧಡಿಗ ತನದಲಿ ॥೭॥ ವರ ಸುಬುದ್ಧಿಯಸ್ತ್ರಹತಿಗೆ । ಭರದಿ ಮೂರ್ಛೆತಳೆದು ಶಕುನಿ । ಧರೆಯೊಳೊರಗೆ ಕಾಣುತಾಗ । ತರಣಿಜಾತನು ॥೮॥

ರಾಗ ಭೈರವಿ-ಅಷ್ಟತಾಳ

ಪಾತಕಿ ಕೇಳು ನೀನು । ನಮ್ಮಯ ಬಲ । ವ್ರಾತವನೆಲ್ಲವನು । ಖ್ಯಾತಿಯಿಂ ಗೆಲಿದೆನೆಂದೆಣಿಸದಿರೆನುತಸ್ತ್ರ । ವ್ರಾತವ ನೆಚ್ಚನಂದು ॥೧॥ ದುಷ್ಟ ನಾನಲ್ಲ ಕೇಳು । ಪಾಮರಕರ್ಮ । ಭೃಷ್ಟ ನೀನಹುದು ತಾಳು । ಶ್ರೇಷ್ಟ ಸೌಭದ್ರೆಯ ನೆಳೆದೊಯ್ದು ಬಂದಿಹ । ಭೃಷ್ಟ ಹೋಗೆನುತೆಚ್ಚನು ॥೨॥ ಬರುವ ಶರವ ಕಾಣುತ್ತ । ಪ್ರತಿಯ ಬಿರು । ಸರಳಿನಿಂ ತರಿದಿಕ್ಕುತ್ತ । ಗುರಿಯೊಳೊಂದಸ್ತ್ರವ ನೆಸೆಯೆ ಸುಬುದ್ಧಿಯು । ಧರೆಯೊಳಗೊರಗಿದನು ॥೩॥ ॥೧೪೯॥

ಭಾಮಿನಿ

ಮತಿವಿಮೂರ್ಛಿತನಾಗಿ ಧೊಪ್ಪನೆ । ಕ್ಷಿತಿಯೊಳೊರಗಿದ ಸಚಿವನನು ಕಂ । ಡತಿಶಯದ ಕೋಪದಲಿ ಬಭ್ರುವಹನನು ಗರ್ಜಿಸುತ ॥ ಹತಿಸುವೆನು ನಾನೀಗ ದಿನಮಣಿ । ಸುತನನೆನ್ನುತ ಲಂತಕನ ವೋ । ಲತಿ ಪರಾಕ್ರಮದಿಂದ ಮಾರ್ಮಲೆಯುತ್ತಲಿಂತೆಂದ ॥೧॥

ರಾಗ ಮಾರವಿ-ಏಕತಾಳ

ಆರೆಲೆ ನಮ್ಮಯ ಭೂರಿಬಲಗಳನು । ಗಾರುಗೆಡಿಸಿದವನು । ಶೂರತ್ವವ ನೀಕ್ಷಿಸುವೆನು ಕ್ಷಣದಲಿ । ತೋರಿಸು ವಿಕ್ರಮವ ॥೧॥ ಜಲಜಾಪ್ತನ ಸುತ ನಹೆನೆಲೊ ನಾನರೆ । ಘಳಿಗೆಯೊಳೀಕ್ಷಿಪುದು । ಬಲಸಹ ನಿನ್ನನು ಮರ್ಧಿಸಿ ಕಾಲನ । ನಿಲಯಕೆ ಕಳುಹುವೆನು ॥೨॥ ನುಡಿದುದನಾಲಿಸಿ ಪೊಡವಿಪ ಕೋಪದಿ । ಘುಡು ಘುಡಿಸುತಲೆಂದ । ಬಿಡು ಬಿಡು ಪಾಮರ ನೀನಂತಿರಲಾ । ಮೃಡನನು ಗೆಲ್ಲುವೆನು ॥೩॥ ಬೇಡವೊ ಪೌರುಷ ಮೃಡನನು ಗೆಲ್ಲಲು । ಮಾಡದಿರೆಲೊ ಮನವ । ನೋಡೆನ್ನಯ ಸಾಹಸಗಳನೆನುತಣಿ । ಮಾಡಿದ ನಸ್ತ್ರಗಳ ॥೪॥ ಅರಿತಿಹೆ ಚಾಪವನೆತ್ತದೆ ದ್ರೌಪದಿ । ಪರಿಣಯ

ಕಾಲದಲಿ । ಮುರಳಿಚಿ ಬಂದಿಹ ಶೂರನೆನುತ ಸಂ । ಹರಿಸಿದ ಬಹುಶರವ ॥೫॥ ತರಣಿಜ ಗರ್ಜಿಸುತೆಚ್ಚನು ಮೋಹನ । ಶರವತತೀಕ್ಷ್ಣದಿ । ಧರಣಿಪ ಬಬ್ರುವಾಹನ ಮೂರ್ಛೆಯೊಳುರುಳಿದ ಧರೆಯೊಳಗೆ ॥೬॥

ಭಾಮಿನಿ

ಧರಣಿಪತಿ ಜನಮೇಜಯನೆ ಕೇಳ್ । ತರಣಿಸುತ ನಂತಕನ ತೆರದಲಿ । ಭರದಿ ಮೋಹರವನ್ನು ಸಂಹರಿಸುತ್ತಲೈತರಲು ॥ ಪರಿಕಿಸುತಲಭಿಮನ್ಯು ಚಾಪವ । ಧರಿಸಿ ಹರಿನಾದವನು ಗೈಯುತ । ಹರನೊ ಕಲ್ಪಾಂತಕನೊ ಇವನೆಂಬಂತೆ ಮಾರಾಂತ ॥೧॥

ರಾಗ ಕೇದಾರಗೌಳ-ಝಂಪೆತಾಳ

ಭಳಿ ಭಳಿರೆ ಕರ್ಣ ನೀನು । ಸಮರದೊಳು । ಛಲದಿ ಮಾರ್ಬಲಗಳನ್ನು । ಗೆಲಿದೆನೆನುತ್ತಿಗ್ಗಬೇಡ । ಬಂದಿಹೆನು । ಕಲಿಪಾರ್ಥ ತನಯ ನೋಡಾ ॥೧॥ ಅಣುಗ ಪೌರುಷವು ಬೇಡ । ಎನ್ನೊಡನೆ । ರಣದಿ ಸಾಯದಿರು ಗಾಢಾ । ಕೆಣಕಬೇಡೆನ್ನನೀಗ । ಬಂದಂತೆ । ವಿನಯದಿಂ ಸಾರು ಬೇಗ ॥೨॥ ಬಾಲಕನ ಸಾಹಸವನು । ನಿನಗೀಗ । ಲೀಲೆಯೊಳು ತೋರ್ಪೆ ನಾನು । ಕಾಳಗದಿ ನಿನ್ನ ಕೊಂದು । ಕಳುಹುವೆನು । ಕಾಲನೂರುಗಳಿಗಿಂದು ॥೩॥ ದುರುಳ ಕೇಳ್ ನಿನ್ನ ಕೊಂದು । ನೋಡೆನ್ನ । ಧರಣಿಪನ ಬಿಡಿಸಿಕೊಂಡು । ತರುಣಿ ಸೌಭದ್ರೆಯನ್ನು । ಎಳೆದೊಯ್ವೆ । ಪರಿಕಿಸೈ ಸಾಹಸವನು ॥೪॥ ಕೇಳುತ್ತಲೀ ಮಾತನು । ಅಭಿಮನ್ಯು । ತಾಳು ತಾಳೆನುತಲವನು । ತಾಳಿ ಕ್ರೋಧವ ಮನದೊಳು । ಅಸ್ತ್ರಗಳ । ಕೀಲಿಸಿದನೈ ಭರದೊಳು ॥೫॥ ಕಂಡು ಮಾರ್ತಾಂಡ ಸುತನು । ಮನದಿ ಖತಿ । ಗೊಂಡು ಬಹ ಶರಗಳನ್ನು । ಖಂಡಿಸಿದನೈ ಪಥದೊಳು । ಪೇಳಿದನು । ಗಂಡುಗಲಿ ಬಿಡು ಶರಗಳು ॥೬॥ ಪರಿಪರಿಯ ಶಸ್ತ್ರಾಸ್ತ್ರವ । ನೆಸೆಯುತಿರೆ । ಪರಿಕಿಸುತ ಲಿನ ಸಂಭವ । ತರಿದನೈ ಬಹ ಶರವನು । ಘರ್ಜಿಸುತ । ಹರಿನಾದದೊಳು ನಿಂದನು ॥೭॥

ಭಾಮಿನಿ

ಅರಸ ಕೇಳಭಿಮನ್ಯು ಕೋಪದಿ । ಕೆರಳುತೈಂದ್ರಾಸ್ತ್ರವನು ಎಸೆಯಲು । ತರಣಿಜನ ನೊಸಲೊಡೆದು ರಕ್ತವು ಸುರಿವುತಿರೆ ಕಂಡು ॥ ತರಣಿಸುತ ಕಳ

ವಳಿಸಿ ವಂಗಾ । ಪುರಕೆ ಸಾರಿದನಾಗಲಿತ್ತಲು । ತರಳನಿಗೆ ದುಶ್ಶಾಸನಿದಿ ರಾಗುತ್ತಲಿಂತೆಂದ ॥೧॥ ॥೧೬೫॥

ರಾಗ ಭೈರವಿ-ಝಂಪೆತಾಳ

ಆರೆಲವೊ ನಮ್ಮ ಪರಿ । ವಾರವೆಲ್ಲವ ಗೆಲಿದು । ಶೂರನಂದದಿ ಮುಂದೆ ಬರುವ । ಧೀರ ನಿನ್ನಯ ಪೆಸರದೇನು ಪೇಳೆನೆ ನರಕು । ಮಾರ ನಗುತಿಂತೆಂದ ನಾಗ ॥೧॥ ದುರುಳ ಕೇಳೆಲೊ ನಿನ್ನ ಫಣಿಶರದಿ ಬಿಗಿದು ಖೇ । ಚರನು ಕೊಂಡೊಯ್ವ ಕಾಲದೊಳು । ಧುರವೆಸಗಿ ನಿನ್ನ ಜೀವವ ಸಲಹಿದಾತನಿಗೆ । ತರಳ ನಹೆನಭಿಮನ್ಯು ನಾನು ॥೨॥ ಚೋರನಂದದಿ ವನಕೆ ಸಾರಿ ಫಲಪಣ್ಣುಗಳ । ಮೀರಿ ಭುಂಜಿಸುತ ಗಳಿಸಿರುವ । ಶೂರತನವೆನ್ನೊಡನೆ ತೋರದಿರು ಯಮ ಪುರಕೆ । ಸಾರಬೇಡೆಲೊ ಸಾರಿ ಪೇಳ್ದೆ ॥೩॥ ಕರಿಪುರದಿ ತೋಷದಿಂ ಕುಳಿತು ಪಾಲ್ಗೊಸರುಗಳ । ಹರುಷದಿಂ ಮೆದ್ದು ಗಳಿಸಿರುವ । ಧುರಪರಾಕ್ರಮಗಳೆನ್ನೊಡನೀಗ ಸಲ್ಲದೈ । ತೆರಳದಿರು ಅಂತಕನ ಪುರಕೆ ॥೪॥ ಸಿಲುಕಿಹನು ಕುರುಭೂಪನೆಂಬ ಗರ್ವದಿ ಧುರಕೆ । ಛಲದೊಳೈತಂದೆಯಾ ಮರುಳೆ । ಒಲವಿನೊಳ್ ಕೌರವನ ತಂದಿತ್ತು ಪದಕೆರಗೆ । ಸಲಹುವೆನು ನಿನ್ನನೆನಲೆಂದ ॥೫॥ ವರಕಪಟ ದ್ಯೂತದೊಳ್ ಪಾಂಡುಜಾತರ ವನಕೆ । ಬೆರಸಿದೆನು ಎಂಬ ಗರ್ವದಲಿ । ಧುರಕೆ ಬಂದೆಯ ಇಳೆಯನಿತ್ತು ಬೊಪ್ಪನ ಪಾದ । ಕೆರಗಿದರೆ ಕ್ಷಾವೆ ತಾನೆಂದ ॥೬॥

ರಾಗ ಘಂಟಾರವ-ಅಷ್ಟತಾಳ

ಅರರೆ ಬಾಲಕಗಿನಿತು ವಿಕ್ರಮವುಂಟೆ । ಪರಿಕಿಸೆನುತ ದುಶ್ಶಾಸನಾಖ್ಯನು । ಉರಗಬಾಣವನೆಚ್ಚನು ॥೧॥ ಕಂಡು ಕೋಪದಿ ನರಕುಮಾರಕನಾಗ । ಕೆಂಡಗಳ ನುಗುಳುತ್ತ ನೇತ್ರದಿ । ಖಂಡಿಸಿದನುರಗಾಸ್ತ್ರದಿ ॥೨॥ ಉರಿಯುಸೂಸುತ್ತ ಕುರುರಾಯನನುಜನು । ತರಳ ಸೈರಿಸು ಸೈರಿಸೆನುತಲಿ । ಉರಿಯ ಮಾರ್ಗಣವೆಚ್ಚನು ॥೩॥ ಬಿಡುಬಿಡೀ ಶರವೆನುತ ಲಾರ್ಭಟಿಸುತ್ತ । ಕಡುಪರಾಕ್ರಮಿ ವರುಣ ಬಾಣದಿ । ತಡೆಗಡಿದನೈ ಮುದದೊಳು ॥೪॥ ಗರ್ವ ವ್ಯಾಕೆಲೊ ಕಾಲನೂರಿಗೆ ನಿನ್ನ । ಸರ್ವರರಿವಂದದಲಿ ಕಳುಹುವೆ । ಪರ್ವತಾಸ್ತ್ರವ ತಾಳಿಕೊ ॥೫॥ ಎಂದ ಮಾತನು ಕೇಳುತ್ತಲಭಿಮನ್ಯು । ಚಂದದಿಂ ವಜ್ರಾಸ್ತ್ರದಿಂ ಕಡಿ । ದೆಂದನಾ ದುಶ್ಶಾಸಗೆ ॥೬॥ ॥೧೬೬॥

Scanned by CamScanner

ರಾಗ ಸೌರಾಷ್ಟ್ರ ಮಟ್ಟೆತಾಳ

(ನಡಿಯಲೋ ಮುರಾರಿ ಸುಖದೊಳು ಎಂಬಂತೆ)

ಬೇಡ ಬೇಡ ಸಮರವೆನ್ನೊಳು । ಮೂಢಮತಿಗಳೇಕೊ ನಿನಗೆ । ಬೇಡ ಬೇಡ ಸಮರವೆನ್ನೊಳು ॥ಪಲ್ಲ॥ ನೋಡು ಪಿಂತೆ ಧರ್ಮರಾಯನ । ಕಪಟ ದ್ಯೂತ । ಮಾಡಿ ಸೋಲಿಸುತ್ತಲಾತನ । ರೂಢಿಯನ್ನು ಸೆಳೆದುಕೊಂಡು । ಮಾಡಿ ಮಾನಭಂಗ ಸತಿಗೆ । ಕಾಡಿಗಟ್ಟಿದಂದವಲ್ಲ । ನೋಡು ನಾವು ನರನ ಸುತನೆಲಾ । ಎನ್ನೊಳ್ ಧುರವ । ಮಾಡಬೇಡ ಪೋಗು ಪೋಗೆಲಾ ॥೧॥ ವರಕಿರೀಟಿ ತರಳಕೇಳೆಲಾ । ಕೌರವನನು । ಕರವಬಿಗಿದುದ್ಯಾಕೆ ಪೇಳೆಲಾ । ಕುರುಕುಲೇಶನನ್ನು ನೀನು । ತ್ವರಿತದಿಂದ ಬಿಡಿಸಿ ತಂದು । ಭರದಿ ಪಾದ ಕೊಂದಿಸಿದರೆ । ಧುರವ ಬಿಟ್ಟು ಪೋಪೆನೀಗ । ಕರುಣದಿಂದ ಪೊರವೆನಿನ್ನನು । ಅಲ್ಲದಿರಲು । ಧುರದಿ ಕೊಲುವೆನೆಂದನಾತನು ॥೨॥ ದುರುಳ ಕೇಳು ಕೌರವೇಂದ್ರನು । ಎನ್ನಮಾತೆ । ಪರಮ ಸುಗುಣೆ ಪತಿವ್ರತೇಯನು । ಗರುವ ದಿಂದಲೊಯ್ಯೆ ಬರಲು । ತುರುಣಿ ತನ್ನ ಜೀವ ಭಯಕೆ । ಉರಗ ಶರದಿ ಬಾಧಿಸಿಹಳು । ದುರುಳ ಕೌರವೇಂದ್ರಗಿದುವೆ । ಸರಿಯೆ ನೀತಿ ಮಾರ್ಗ ವೇನೆಲಾ । ಪೋಗದಿರಲು । ಧುರದಿ ಬೆದರಿ ಪೋಗೆ ನಾನೆಲಾ ॥೩॥

ರಾಗ ಜಂಜುಟಿ ಅಷ್ಟತಾಳ

ನೀತಿವಂತನು ತವಪಿತನು । ಗನ್ನ । ಘಾತಕಿ ಕೇಳು ಪೇಳುವೆನು । ನೀತಿ ಯಿಲ್ಲದೆ ಖಾಂಡಾವನವನ್ನು ಗರ್ವದಿ । ಭೀತಿಯಿಲ್ಲದೆ ಸಕಲ ಖಗಮೃಗ । ವ್ರಾತವನು ವಹ್ನಿಯೊಳು ದಹಿಸಿದ ॥೧॥

॥೧೮೧॥

ರಾಗ ಸೌರಾಷ್ಟ್ರ ಮಟ್ಟೆತಾಳ

ವರಿವೆನೂ ಕೇಳೆಲೊ ಧನಂಜಯ । ಮರುತಸಖಗೆ । ಅರಿಯದಿತ್ತನಾಗ ಭಾಷೆಯ । ವರದ ಭಾಷೆ ನಡೆಸಲೆಂದು । ಉರಿಯನಿಕ್ಕಿ ದಹಿಸಿರುವನು । ದುರುಳ ನೀನು ಪಾಂಡವರಿಗೆ । ಅರಗಿನಾಲಯುವನು ರಚಿಸಿ । ಭರದಿ ಪಾಂಡು ಸುತರು ಇರುಳಲಿ । ನಿದ್ರಿಸಿರಲು । ಉರಿಯನಿಕ್ಕಿದ್ಯಾಕೆ ಮದದಲಿ ॥೧॥

ರಾಗ ಜಂಜುಟಿ ಅಷ್ಟತಾಳ

ಬರಿಯ ಮಾತುಗಳಿಂದ ಫಲವ । ಕಾಣ । ಅರಿಯದು ನಿನ್ನಯುಶಿರವ ।

Scanned by CamScanner

ಅರಿವೆ ನಾನೀಕ್ಷಣ ನೋಡು ಸಾಹಸ ನಿನ್ನ । ಶಿರವನಃಳುಹಲು ನಿನ್ನ ತಾತನ । ಕರಿಸ ಕರೆಸೆನಲೆಂದನಾತನು ॥೧॥

ರಾಗ ಭೈರವಿ-ಝಂಪೆತಾಳ

ಹುಲ್ಲೆಯನು ನಖದಿಂದ । ಕೊಲ್ಲುವರೆ ವ್ಯಾಘ್ರನೊಳು ಸಲ್ಲದೇ ಸಿಂಹ ತಾನ್ಯಾಕೇ । ಖುಲ್ಲ ನಿನ್ನನು ಧುರದಿ । ಗೆಲ್ಲುವರೆ ಎನ್ನೊಡನೆ । ಸಲ್ಲದೇನೆಲೊ ಪಾರ್ಥನ್ಯಾಕೆ ॥೧॥

ರಾಗ ಜಂಜುಟಿ-ಅಷ್ಟತಾಳ

ತರಳ ಕೇಳ್ ನಿನ್ನನು ಕೊಲಲು । ಮನ । ಬರಲರಿದೆಲವೊ ನೀಕೇಳು । ದೊರಕುವ ದಣಿಗ ಹತ್ಯದ ಪಾಪವದರಿಂದ । ಕರುದಿಂ ಸಲಹಿದೆನು ಹಿಂದಕೆ । ತೆರಳು ಮನ ಬಂದಂತೆ ಬೇಗನೆ ॥೧॥

ರಾಗ ಭೈರವಿ-ಝಂಪೆತಾಳ

ಹುಡುಗನಾ ಸಾಹಸವ । ಕಡೆಗೆ ತೋರುವೆ ನಿನಗೆ । ಬಿಡುಬಿಡೆಲೊ ಭೂರಿವಾರ್ಗಣವ । ಬಡಿವಾರ ಸಹಸವೆನ್ನೊಡನೀಗ ಸಲ್ಲದೈ । ನಡಿನಡಿಯೊ ನಿನ್ನ ಪುರವರಕೆ ॥೧॥ ॥೧೮೬॥

ರಾಗ ಭೈರವಿ-ಏಕತಾಳ

ಅರರೇ ಬಾಲಕ ಕೇಳು । ನಿನ । ಗಿರುತಿರೆ ಸಾಹಸ ತಾಳು । ಪರಿಕಿಸು ಶೌರ್ಯವನೆನುತ । ಬಲು । ಶರ ವೆಸೆಯುಲು ಕಾಣುತ್ತ ॥೧॥ ಉರಿಸೂ ಸುತ ಲಭಿಮನ್ಯು । ಬಹ । ಶರಗಳ ಕತ್ತರಿಸಿದನು । ಅರಿಸ್ಯಂಧನವನ್ನಾಗ । ಸಲೆ । ತರಿದಿಕ್ಕಿದ ನತಿಬೇಗ ॥೨॥ ಖತಿಯೊಳು ದುಶ್ಶ್ಯಾಸನನು । ಪ್ರತಿ । ರಥವನ್ನೇರಿದನವನು । ಮಥಿಸುತ ಬರೆ ಬಲವನ್ನು । ಕಂ । ಡತಿ ಕ್ರೋಧದೊಳಭಿಮನ್ಯು ॥೩॥ ಚಂದದಿ ಬಾಣವನೆಸೆದಾ । ಅರಿ । ಸ್ಯಂಧನ ಚಾಪವ ಕಡಿದಾ । ನಿಂದಿಸು ತಿರಲಭಿಮನ್ಯು । ಖತಿ । ಯಿಂದಲಿ ದುಶ್ಶ್ಯಾಸನನು ॥೪॥ ಗಧೆಯನುತಿರುಹುತ ಲಾಗ । ಬಲ । ಸದೆಬಡಿಯುತ ಬರೆಬೇಗ । ಅದಕಂಡಾ ನರತನಯ ।ಬಲು । ಒದಗಿಲಿ ತಂದನು ಗದೆಯ ॥೫॥ ಝಡಿಯುತ ಖಡುಗವಪಿಡಿದು ತಲೆ । ಕಡಿವೆನೆನುತ ಮುಂಬರಿದು । ಘುಡು ಘುಡಿಸುತಲೈ ತರಲು । ಅದ । ಕಡಿದನು ಬಲು ಶೌರ್ಯದೊಳು ॥೬॥ ೧೯೨॥

Scanned by CamScanner

ಭಾಮಿನಿ

ಕರದ ಖಡುಗವು ಪೋಗೆ ಮನದಲಿ । ಕರಗು ತೀರ್ಪನ ಕಂಡು ಪಾರ್ಥನ । ತರಳನೆಂದನು ಘನ್ನ ಘಾತಕಿ ಧುರವನೆಸಗೆನಲು ॥ ತರಳನಿವನತಿ ಧೀರ ನಿವನೊಳು । ಧುರದಿ ಗೆಲುವಡಸಾಧ್ಯವೆನ್ನುತ । ಭರದಿ ದಿಗ್ದೆಸೆ ನೋಡಿ ಪೋಪನ ಕಾಣತಭಿಮನ್ಯು ॥೧॥

ರಾಗ ಕೇದಾರಗೌಳ–ಅಷ್ಟತಾಳ

ಬೆದರುತ್ತ ಪೋಪೆಯ । ಮದ ನಾರಿಯನು ಗೆಲ್ವ ।ಕದನ ಕಂಠೀರವನೆ । ಕದನದೊಳೆನ್ನನು । ಸದೆ ಬಡಿಯದೆ ಈಗ । ಹುದುಗಿಕೊಳ್ವೆಯು ಬರಿದೇ॥೧॥ ಎತ್ತ ಪೋದರು ಬಿಡೆ । ಕತ್ತೆಯೆ ನಿನ್ನನೆ । ನುತ್ತಲಿ ಘರ್ಜಿಸುತ । ವೃತ್ರಾರಿ ಪೌತ್ರಬೆಂ । ಬತ್ತುತ್ತ ಪೋಗಲು । ಸುತ್ತಿ ಅರ್ಣ್ಯವನು ॥೨॥ ಕಡು ಭೀತಿ ಯನು ತಾಳಿ । ನಡು ನಡುಗುತ್ತಲಿ । ಧಡಿಗ ದುಶ್ಯಾಸನನು । ಬಿಡದೆ ಕಾನನ ದೊಳು । ನಡಿಯುತ್ತ ಪೊದೆಯೊಳು । ಅಡಗಿ ಕೊಂಡಿರುತೀರ್ದನು ॥೩॥ ಘುಡು ಘುಡಿಸುತ್ತಲಿ । ಅಡವಿಯೊಳಭಿಮನ್ಯು । ಹುಡುಕಿ ಕಾಣದೆ ಇರಲು । ಸುಡು ಸುಡೀತನ ನೆತ್ತ । ಅಡಗೀರ್ಪನೋ ಎಂದು । ನಡೆದನು ಮಣಿ ಪುರಿಗೆ ॥೪॥

॥೧೯೭॥

ವಾರ್ಧಿಕ

ರಾಯ ಜನಮೇಜಯನೆ ಕೇಳು ಮಣಿಪುರಕೆ ವ । ಜ್ರಾಯು ಧನ ಪೌತ್ರನಭಿಮನ್ಯು ಬರುತಿರಲು ಕುರು । ರಾಯ ಮೋಹರವೆಲ್ಲ ಹೃದಯ ದೊಳು ಕಳವಳಿಸಿ ಜೀವಾಭಿಲಾಸೆಯಿಂದ ॥ ಹಾಯೆನುತ ಕರಿಪುರಕೆ ಮಾರ್ಗವಂ ಪಿಡಿದು ಬಲು । ಆಯಸದಿ ಕಂಗೆಡುತ ನಡೆತಂದು ಗತನೇತ್ರ । ರಾಯ ನಿರುವೆಡೆಗೈದಿ ಕೈಮುಗಿದು ಭೀತಿಯಿಂ ಬಿಸು ಸುಯ್ದು ರೇನೆಂಬೆನು॥೧॥

ರಾಗ ಬೇಗಡೆ–ಏಕತಾಳ

ಧರಣಿಪತಿ ಶಶಿಕುಲ ಶಿಖಾಮಣಿಯೆ। ನಾನೆಂಬ ವಚನವ । ಕರುಣ ದಿಂದಾಲಿಪುದು ಕುರು ಧೊರೆಯೆ । ದುರುಳತನ ದೊಳಗೈದಿ ನಿಮ್ಮಯ । ತರಳ ಕೌರವಗಾದ ವಿಧಿಯನು । ವರೆಯಲಂಜುವೆನಾದರೆಯು ನಾ । ನರುಹುವೆನು ಕಿವಿಗೊಟ್ಟುಲಾಲಿಸು ॥೧॥ ತರುಣಿಮಣಿ ಸೌಭದ್ರೆಯ ಕೂಡೆ ।

Scanned by CamScanner

ಕೌರವನು ತನ್ನಯ । ಪುರಕೆ ಬೇಗನೆ ಬಾರೆನುತ ಲಾಡೆ । ಉರಿಯನುಗುಳುತ ಖೂಳ ಹೋಗೆಂ । ದರುಹಲಾಸತಿ ಕೋಪದಿಂತವ । ತರಳನಾಕೆಯ ಪಿಡಿಯ ಲೆತ್ನಿಸೆ । ಹರಣದಾಸೆಗೆ ಬೆದರುತಾಸತಿ ॥೨॥ ತೋಳ್ಗಳನು ಫಣಿಪಾಶದಿಂ ಬಿಗಿಯೆ । ಕರ್ಣಾದಿ ಸುಭಟರು । ಆಳ್ಗಳಂ ಕೊಡುತ್ತ ಮುಂಬರಿಯೆ । ಕೋಲ್ಗಳಿಂ ಮಣಿನಗರಪತಿ ನ । ವ್ಯಾಳ್ಗಳಂ ಸಂಹರಿಸಲಾತನ । ಮೇಲ್ಗರೆದು ಶರಮಳೆಯ ಸುಭಟರ । ಸಾಲ್ಗಳಂ ಸವರಿದನು ತರಣಿಜ ॥೩॥ ನರನಣುಗ ಗೆಲಿದರ್ಕಜಾದ್ಯರನು । ಅಂತಕನ ತೆರದಲಿ । ತರಿವುತ್ತೈತರೆ ನಮ್ಮ ಬಲಗಳನು । ತರಣಿಸುತನೈದಿದನು ವಂಗಾ । ಪುರಕೆ ಗಾಂಧಾರಾಧಿಪತಿ ತ । ತ್ಪುರಕೆ ಸಾರಿದ ನಿಮ್ಮ ಸುತ ತರ । ಹರಿಸಿ ದಿಗ್ದೆಸೆ ನೋಡಿ ಪೋದನು ॥೪॥

ಭಾಮಿನಿ

ಕೇಳ್ಧರಣಿ ಪಾಲಕನೆ ಭಯದಲಿ । ನಾಲ್ದೆಸೆಗೆ ನಮ್ಮವರು ಪೋಡಲು । ಕಾಲ್ದಣಿಯೆ ನಡೆತಂದೆವಿಲ್ಲಿಗೆ ಹರಣದಾಸೆಯಲಿ ॥ ಪೇಳ್ದ ನುಡಿಗಳ ನಾಲಿಸುತ ನ । ವ್ಯಾಳ್ದ ದುರ್ಯೋಧನನ ಕಾಯದ । ಮೇಲ್ದಯವದೋರುತ್ತ ರಕ್ಷಿಪುದೆಂದು ಕೈಮುಗಿಯೆ ॥೧॥

ರಾಗ ನೀಲಾಂಬರಿ-ಏಕತಾಳ

ಚರರೆಂದ ನುಡಿಕೇಳಿ । ಧರಣೀಪತಿ ಧೃತರಾಷ್ಟ್ರನು । ತರಹರಿಸುತ ಲಿಂತೆಂದನು । ಮರುಗೀ ತನ್ನೊಳಗೆ ॥೧॥ ಮೊದಲೇ ಪೇಳಿದೆನಾತಗೆ । ಸುದತಿಯ ತರಬೇಡೆಂದು । ಅದಕೇಳದೆ ತೆರಳಿದನೂ । ಮದಮುಖ ಮಮ ಸುತನು ॥೨॥ ತರುಣಿಯು ಎನ್ನಯ ತನುಜನ । ಕರಗಳ ಬಿಗಿದಳು ಸುಭಟರ । ತರಳರು ಗೆಲಿದರು ಬಹಳಾ । ಶ್ಚರಿಯಾಯ್ತಿಂದಿನಲಿ ॥೩॥ ಉದ್ರೇಕಿಸಿ ಗರ್ವವದೈ । ವದ್ರೋಹವ ಗೈಯಲು ಸ್ವಾ । ಮಿದ್ರೋಹನು ತೆರಳಿದನೈ । ತದ್ರಿಪುಸುತಗಾಯ್ತು ॥೪॥ ಇನ್ನೇನ ಗೈಯುವೆನು । ಎನ್ನಯ ಜಾತನ ಬಿಡಿಸಲು । ಜಾಹ್ನವಿಸುತಗರುಹುವೆನೆಂ । ದುನ್ನತ ಶೋಕದೊಳಃ ॥೫॥೨೦೪॥

ವಾರ್ಧಿಕ

ಉರ್ವೀಶ ಕೇಳಿಂತು ಧೃತರಾಷ್ಟ್ರ ಚಿಂತಿಸಿ ನಿ । ಗರ್ವದಿಂ ಗಾಂಗೇಯನೆಡೆಗೈದಿ ಬಿಸುಸುಯ್ದು । ಗರ್ವದಿಂದೆನ್ನ ಸುತ ಇನಜರೊಡಗೂಡಿ ಹರಿ

Scanned by CamScanner

ಯನುಜೆಯಂ ತರುವೆನೆನುತ ॥ ಗೀರ್ವಾಣಸುತ ನರಸಿಯೊಡೆಗೈದಿ ಘರ್ಜಿಸ। ಲ್ಯೋರ್ವನಂ ಫಣಿಪಾಶದಿಂ ಬಿಗಿಯಲಾಸುದತಿ। ಸರ್ವರಂ ಗೆಲಿದೀರ್ಪ ಬಾಲಕರು ದಿಗ್ದೆಸೆಗೆ ತೆರಳಿಸಿದರೇನೆಂಬೆನು ॥೧॥

ರಾಗ ರೇಗುಪ್ತಿ-ಅಷ್ಟತಾಳ

ಕೇಳಯ್ಯ ಗಾಂಗೇಯ ನೀನು। ನಾನು। ಪೇಳುವ ವಚನವೆಲ್ಲವನು। ಖೂಳಕೌರವನನೇನಾದರುಪಾಯದಿ। ಲೀಲೆಯೊಳ್ ಬಿಡಿಸಿತಾರೆನ್ನುತ ನವಿ ಸಲು ॥೧॥ ಎನಲಾ ಮಾತನು ಗಂಗಾಸುತನು। ಕೇಳಿ। ಕನಿಕರದಿಂದ ಪೇಳಿದನು। ವನಿತೆಯು ದೊರಕುವಳೆಂಬುವ ಬಯಲಾಸೆ। ನಿನಗೆ ಬೇಡೆಂದ ರಾಲಿಸದೆ ಪೋದನು ಪಾಪಿ ॥೨॥ ಧರ್ಮಜನೆಂಬ ಭೂಮಿಪನು। ಸಾಧು। ನಿರ್ಮಲಹೃದಯ ಸದ್ಗುಣನು। ದುರ್ಮತಿಗಳು ರಕ್ತ ಬಲದಿ ಗರ್ವಿಸಿದರೆ। ಮಾರ್ಮಲೆಯುವರೆ ಶ್ರೀಕೃಷ್ಣನ ಮಹಿಮೆಗೆ ॥೩॥ ಏನಗೈದರೆ ಇನ್ನೇನು। ನಾನಿ। ನ್ನೇನ ಪೇಳಲು ಫಲವೇನು। ನೀನೆನ್ನ ಜೊತೆಯೊಳು ಬರಲು ಕೌರವ ನನ್ನು। ಸಾನುರಾಗದಿ ಕರೆತಂದಪೆನೆಂದನು ॥೪॥ ಅಂಧಕನೃಪಗೆ ಧೈರ್ಯ ವನು। ಪೇಳಿ। ಸ್ಯಂಧನವನು ತರಿಸಿದನು। ಚಂದದಿಂದುಭಯರು ಏರುತ್ತ ರಥವನು। ಬಂದರು ವೇಗದಲಾ ಮಣಿನಗರಿಗೆ ॥೫॥

ರಾಗ ಸಾರಂಗ-ಆದಿತಾಳ

ಕರೆದೊರ್ವ ಚಾರನನು। ಪೇಳಿದನಾಗ। ಸುರನದಿಸುಕುಮಾರನು। ಧೊರೆ ಬಭ್ರುವಾಹನಗರುಹು ಗಂಗಾತ್ಮಜ। ತೆರಳಿಬಂದೀ ಎಡೆ ಇರುವ ನೆಂದೆನುತಲಿ ॥೧॥ ಕದನವ ಗೈಯಲಿನ್ನು। ಬಂದವನಲ್ಲ। ಬೆದರಬೇಡೆಂಬು ದನು। ವದಗಿಲಿ ಪೇಳಿ ಬಾರೆನಲಾಗ ಭೂಪನ। ಪದಯುಗಕೆರಗುತ್ತ ಲೆಂದ ಚಾರಕ ತಾನು ॥೨॥ ಧೂರೆರಾಯ ನಾನೆಂಬುದ। ಲಾಲಿಸಿ ಕೇಳು। ಅರು ಹುವೆ ಕರಿಪುರದ। ಅರಸನಂಧಕ ಮತ್ತೆ ಸುರನದಿ ತನಯರು। ತೆರಳಿ ಬಂದಿಹ ರೀಗ ಪರಮಸಂತೋಷದಿ ॥೩॥ ಕಡಿದಾಟಕಲ್ಲ ತಾನು। ಬಂದಿಹುದೆಂದು। ನುಡಿದ ಗಂಗಾತ್ಮಜನು। ಸಡಗರದಲಿ ನಿಮ್ಮೊಳರುಹಿಬಾರೆನೆ ಕೇಳಿ। ಒಡೆಯ ನಿಮ್ಮೊಡನೀಗ ಲರಿಕೆಯುಗೈದೆನು ॥೪॥ ॥೨೧೮॥

ಕಂದ

ಚರನಿಂತೆಂದುದ ಕೇಳುತ। ಧರಣಿಪ ಬಭ್ರುವಾಹನನಾಕ್ಷಣದೋಳ್

Scanned by CamScanner

ಭರದಿಂ ಬಂದಾ ಭೀಷ್ಮನ । ಕರೆತಂದಾಗನ ವಿನಯಾತ ಮನ್ನಿಸುತೆಂದಂ ॥೧॥

ರಾಗ ನಾದನಾಮಕ್ರಿಯೆ-ಅಷ್ಟತಾಳ

ಕೇಳಲಿವಿ ಸುರನದಿ ತನಯನೆ । ಮತ್ತೆ । ವಸುಧೆಪಾಲಕ ಧೃತರಾಷ್ಟ್ರನೆ । ಉಸುರಿರ್ಪೆತವ ಮನದಿರವನ್ನು । ಬೇಗ । ಬೆಸಸಿರ್ಪೆ ಬಂದ ಕಾರ್ಯಂಗಳನ್ನು ॥೧॥ ಎನಲೆಂದನೆಲಿ ಭೂಪಾಲಕ ಕೇಳು । ಒಂದು । ದಿನ ಕೌರವನು ಬಲು ಮದದೊಳು । ವನಜನೇತ್ರನ ಸಹೋದರಿಯನ್ನು । ತಡೆ । ನೆನುತ ಗರ್ವದಿ ಬಲು ಬಲವನ್ನು ॥೨॥ ನೆರಹಿ ಕರ್ಣಾದಿಗಳೊಡಗೊಂಡು । ಮತ್ತೆ । ತರಿಸಿ ಸ್ಯಂದನವ ಪೌರುಷಗೊಂಡು । ಪೋರಮಡಲುದ್ಯುಕ್ತನಾಗಲು । ಕಂಡು । ಅರುಹಿದೆ ನೀತಿಯನಾಗಳು ॥೩॥ ॥೨೨೨॥

ವಾರ್ಧಿಕ

ಕಂಸಾರಿ ಭಜಕರೋಳ್ ಕಲಹ ಬೇಡೆನುತ ನಯ । ದಿಂ ಸಾರಿ ಪೇಳ್ದ ಡದ ನಾಲಿಸದೆ ಬಲು ಗರ್ವ । ದಿಂ ಸಾರಿ ಬಂದಿಲ್ಲಿ ನಡೆದೀರ್ಪುದೆಲ್ಲವಂ ನೀ ಭೂಪ ನೊರೆದನೆನಗೇ ॥ ಹಂಸವಾಹನ ಪಿತನ ದಯವಿರಲ್ ಭಯಕಷ್ಟ । ಮುಂ ಸರ್ವಥಾ ಬಾರದೆಂದು ನಾಬಲ್ಲೆ ನೀ । ನುಂ ಸರ್ವಥಾ ಮನದಿ ಕ್ರೋಧ ಗೊಳ್ಳದೆ ಕೌರವನ ಬಿಡಿಸಿ ತಾರೆಂದನು ॥೧॥

ರಾಗ ಸಾಂಗತ್ಯ-ರೂಪಕತಾಳ

ಸುರನದಿ ತನಯ ಕೇಳುರಗಪಾಲಕ ತಾನು । ಹರುಷದೊಳಾ ಫಣಿ ಶರವ । ಕರುಣಿಪಕಾಲದಿ ವರವನಿತ್ತಿಹನೊಂದೀ । ಉರಗಪಾಶವ ಬಿಡಿಸುವರೀ ॥೧॥ ಸರಸಿಜಲೋಚನೆ ದ್ರೌಪದಿಯಲ್ಲದೆ ಪರರಿಂದಸಾಧ್ಯವೆಂದೆನುತ । ತ್ವರಿತದಿ ತೆರಳಿ ನೀ ನಾ ತರುಣಿಯನಿಲ್ಲಿ । ಕರೆತಂದೀ ಪಾಶವ ಬಿಡಿಸಿ ॥೨॥ ಜನಪಾಲನನು ಪುರಕಾಗಿ ಕೊಂಡ್ಯೊವುದೆಂ । ದೆನೆ ಕೇಳುತಾಗಲಾ ಭೀಷ್ಮ । ವನಜಲೋಚನೆಯು ತಾನಿಲ್ಲಿಗೈತಾರಳೆಂ । ದೆನುತಲಿಂತೆಂದ ಚಾರನೊಳು ॥೩॥ ಕೇಳಿರೈ ಚರರಿರಾ ಕುರುಭೂಪಾಲನ ಪೊತ್ತು । ಏಳಿರೈಕಾಮ್ಯಕಾವನಕೆ । ಪೇಳಿ ದ್ರೌಪದಿಯೊಳು ಬಿಡಿಸುವೆನೀತನ । ಲೀಲೆಯೊಳೆನುತಲಿ ನುಡಿದ ॥೪॥ ಎನೆ ಕೇಳಿ ಚಾರರಾಕ್ಷಣದೊಳು ಏಣಿಯು । ಜನಪಾಲನನು ಸಹಿತಾಗ । ಘನವೇಗದೊಳು ಪೊತ್ತುಕೊಂಡ್ಯೊದು ಕಾಮ್ಯಕಾ । ವನದೊಳಗಿಳುಹಿದರಾಗ ॥೫॥

Scanned by CamScanner

ಭಾಮಿನಿ

ಸುರನದಿಯ ಸುಕುಮಾರ ಮತ್ತಾ। ಧರಣಿಪತಿ ಧೃತರಾಷ್ಟ್ರ ಸಹಿತಲಿ। ಭರದಿ ನಡೆತಂದಾಗ ಕಾಮ್ಯಕ ವನದ ಬಳಿಗಾಗಿ ॥ ತರಣಿಸುತನಾತ್ಮಜನ ಮಂದಿರ। ಕಿರದೆ ಬರೆ ಕಂಡಾಗ ಧರ್ಮಜ। ಶಿರವಬಾಗುತ ಸತ್ಕರಿಸುತಿಂತೆಂದ ಭೀಷ್ಮನೊಳು ॥೧॥ ॥೨೯॥

ರಾಗ ಶಂಕರಾಭರಣ-ಆದಿತಾಳ

(ಹರಿಯೆ ಲಾಲಿಸು ನಿನ್ನ ಎಂಬಂತೆ)

ಬಡವರಾಗಿಹೆವ್ಯೆ ನಾವ್ ನಿಮಗೆ ಸತ್ಕಾರ। ನಡೆಸಲು ನಮ್ಮ ವಾಸ್ತವ್ಯ ಕಾಂತಾರ ॥೧॥ ಹಿಂದೆ ನವ್ಮನು ಬಲು ದಯದಿ ಪೋಷಿಸುತ। ಇಂದು ಸೀವ್ ನವ್ಮೊಳು ಪ್ರೇಮವನಿಡುತ ॥೨॥ ಬಂದೀರೆ ಕುಶಲವೆ ಸಕಲ ಸೋದರರು। ಚಂದದಿಂದಿಹರೆ ಗಾಂಧಾರಿ ಕುಂತಿಯರು ॥೩॥ ಇಂದುವಂಶಜನ ಏಣಿಯಲಿ ಬಂಧಿಸುತ। ತಂದೀರ್ಪಿರ್ಯಾಕಿಲ್ಲಿ ಪೇಳಿರೈ ತ್ವರಿತ ॥೪॥

ರಾಗ ಸೌರಾಷ್ಟ್ರ-ಅಷ್ಟತಾಳ

ಎನೆಪೇಳ್ದ ನೀಖೂಳ ಗರ್ವದೊಳೊಂದಿನ। ಕಂದ ಕೇಳು। ಹರಿ। ಯನುಜೆ ಸೌಭದ್ರೆಯ ತಹೆನೆಂದು ಪೊರಡಲು। ಕಂದ ಕೇಳು ॥೨॥ ಬೇಡೆಂದು ಪೇಳೆ ಕೇಳದೆ ನಮ್ಮ ಮಾತನು। ಕಂದ ಕೇಳು। ಕಡು। ಮೂಢ ಕರ್ನಾದ್ಯರ ನೊಡಗೊಂಡು ಪೊರಟನು। ಕಂದ ಕೇಳು ॥೨॥ ಹರಿತಂದು ಮಣಿಪುರದೆಡೆಗಾಗಿ ಸರ್ವರು। ಕಂದ ಕೇಳು। ನರ। ನರಸಿಯ ತುಡುಕಲಾ ಸುದತಿಯು ಖತಿಯೊಳು। ಕಂದ ಕೇಳು ॥೩॥ ಪನ್ನಗಪಾಲನು ಕರುಣದೊಳಿತ್ತಿಹ। ಕಂದ ಕೇಳು। ವರ। ಪನ್ನಗಪಾಶದಿ ಬಿಗಿದಳೀ ಖಳನನ್ನು। ಕಂದ ಕೇಳು ॥೪॥ ಕರ್ನಾದಿ ಸುಭಟರ ಗೆಲಿದರು ಸಮರದಿ। ಕಂದ ಕೇಳು। ಅಭಿ। ಮನ್ಯು ಮತ್ತಾ ಬಭ್ರುವಾಹನರೀರ್ವರು। ಕಂದ ಕೇಳು ॥೫॥

ವಾರ್ಧಿಕ

ತರಳ ಕೇಳಿದನೆಲ್ಲ ಚರರ ಮುಖದಿಂದರಿತು। ತೆರಳಿ ಮಣಿಪುರಕೈದು ತೀಖೂಳನನ್ನಿಲ್ಲಿ। ಕರೆದುತಂದೀರ್ಪೆವೀ ಉರಗಪಾಶವ ನಿನ್ನ ತರುಣಿ ದ್ರೌಪದಿಯಲ್ಲದೆ ॥ ಪರರಿಂದಲಾಗದೆಂದುರಗೇಂದ್ರ ನಿತ್ತೀರ್ದ। ವರವನದರಿಂದ

Scanned by CamScanner

ದ್ರೌಪದಿಗೆ ನೀನಿದನರುಹಿ । ದುರುಳನಂ ಬಿಡಿಸೆನಲ್ ವಿಲಯ ಭೈರವನಂತೆ ನರನು ಹೂಂಕರಿಸುತೆದ್ದು ॥೧॥

ರಾಗ ಭೈರವಿ-ಝುಂಪೆತಾಳ

ಪರವಧುವಿಗಳುಪಿರ್ದ ಪರಮಪಾತಕಿಯಿಂತ। ಹೊರುವಳೇ ಭೂದೇವಿಯಿವನ । ಪರಿಕಿಸಲ್ ಈತನನು ಬರುವದತಿ ಪಾತಕವು । ನೆರೆಬಿಡಿಸಲಿದು ಸಿದ್ಧವೆಂದ ॥೧॥ ಶಚಿಯರಸನಾಜ್ಞೆಯಲಿ ಕೊಳುಗುಳದೊಳೀತನನು । ಖಚರಪತಿ ಬಿಗಿದೊಯ್ಯುತಿರಲು । ರಚಿಸಿ ಸಂಗ್ರಾಮವನು ಬಿಡಿಸೀರ್ಪೆ ಕೌರವನ । ನಿಚಯವೆಲ್ಲವ ತೋಷದಿಂದ ॥೨॥ ಉಪಕಾರ ಗೈದುದಕೆ ಸಫಲವಾಯ್ತಿಂದಿನಲಿ । ಅಪಕಾರಗೈದ ನೀ ದುರುಳ । ಚಪಲತ್ವದಿಂದಿವನ ಶಿರವಚಂಡಾಡುವೆನು । ಕೃಪೆಯಾತಕಿವನೊಳೆಂದೆನುತ ॥೩॥ ಎಂದು ಗರ್ಜಿಸುತ ಪೊಳಪೊಳವ ಖಡ್ಗವಪಿಡಿದು । ಚಂದದಿಂ ಝಳಪಿಸುತಲಾಗ । ಬಂದು ಕೌರವನ ಶಿರಕಾನಿಸುತ್ತಿರೆ ಧರ್ಮ । ನಂದನನು ಪೇಳ್ದನಿಂತೆನುತ ॥೪॥೨೪೩॥

ಭಾಮಿನಿ

ತಮ್ಮ ಸೈರಿಸು ಸೈರಿಸಕಟಾ । ಸುಮ್ಮನಿರು ಕೋಪಿಸದಿರೀತನು । ನಮ್ಮ ಸೋದರನಲ್ಲವೇ ಬಿಡು ಸಂಹರಿಸದಿವನ ॥ ಸುಮ್ಮನೀತನ ಕೊಂದು ಫಲವೇನ್ । ನಮ್ಮ ಕರುಣದಿ ರಕ್ಷಿಸಲು ಶ್ರೀ । ನಿರ್ಮಲಾತ್ಮಕನಿರಲು ನಮಗಿನ್ನಾವ ಭಯವಿಲ್ಲ ॥೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ಇಂತು ಧರ್ಮಜನುಸುರೆ ಖಡ್ಗವ । ದಂತಿವಾಹನಸುತನು ಬಿಸುಡುತ। ಪಿಂತಿರುಗಿ ಪೋಗಲ್ಕೆ ಬಲು ಖತಿ। ಯಾಂತು ಭೀಮ ॥೧॥ ಅಕ್ಷಿಗಳೊಳುರಿಯುಗುಳುತಾ ನಿರಿ। ಲಾಕ್ಷನಂದದಿ ಭೀಮಸೇನ ಗ। ತಾಕ್ಷನೃಪನಾತ್ಮಜನ ಕೋಪದ। ಲೀಕ್ಷಿಸಿದನು ॥೨॥ ಭಂಡನೀನಹೆ ಕೇಳು ನಿನ್ನಯ। ಚಂಡನರಿಯುವೆ ನಿನ್ನ ಕಾಯುವ। ಗಂಡುಗಲಿಗಳ ಕರೆಸೆನುತ ಸಲೆ। ಮುಂಡೆಗೊದೆದ ॥೩॥ ಮಾರುತಾತ್ಮಜ ಸೈರಿಸೆಂದಾ। ಧಾರುಣಿಪ ಧರ್ಮಜನು ಪೇಳಲು। ಕ್ರೂರತನದಿಂ ಗಧೆಯ ಪಿಡಿದಾ। ಧೀರನೆಂದ ॥೪॥ ದುರುಳನೀತನ ನಿಡಲು ಭೂಮಿಗೆ। ಬರುವುದೈ ಬಲು ಭಾರವೀತನ। ತರಿದು ಭೂ

ಭಾರವನು ಇಳುಹುವೆ । ಭರದೊಳಿನಲು ॥೫॥

ರಾಗ ಬೇಗಡೆ-ಅಷ್ಟತಾಳ

ಕೇಳುಕೇಳ್ ಧುರಧೀರನಹೆ ಸಹಜ । ಮನದೊಳಗೆ ಖತಿಯನು । ತಾಳದಿರು ಸೈರಿಸಿಕೊ ಮಾರುತಜ । ತೋಳನೆರಡನು ಬಂಧಿಸಿರೆ ನಿ । ನ್ನಾಳುತನವನು ತೋರಲಾತನು । ತಾಳಲಾಪನೆ ಬೇಡ ಸುಮ್ಮನೆ । ಖೂಳತನವೆಸಗದಿರು ಬಾರೈ ॥೧॥ ಈತನಗುತೆಸಗೀರ್ದ ಪಾಪವನು । ಬೇರೊಂದು ಭವದೊಳ । ಗೀತನೇ ದುಃಖಿಸುತ ಭೋಗಿಪನು । ಯಾತಕೀತನ ಕೊಲುವೆ ಇಷ್ಟರ । ಪಾತಕಿಯು ತಾನಾದರೆಮ್ಮನು । ಜಾತನಲ್ಲವೆ ಬೇಡ ಬರಿದೇ । ಪಾತಕವ ಗಳಿಸದಿರು ಸಹಜನೆ ॥೨॥ ಜಡಜನಾಭನ ಕರುಣವೊಂದಿರಲು । ನಮ್ಮುವನು ಬಾಧಿಸೆ । ಕಡುದುರಾತ್ಮನೊಳಹುದೆ ನೀ ಪೇಳು । ಬಿಡುಬಿಡೆನೆ ಬಿಡನೀತನೆನ್ನುತ । ಸುಡುಸುಡೆಂದಾಗದೆಯು ಬಿಸುಡುತ । ನಡೆದನಾಚೆಗೆ ಭೀಮ ದ್ರೌಪದಿ । ಯೊಡನೆ ಪೇಳಿದನಾಗ ಧರ್ಮಜ ॥೩॥

ಭಾಮಿನಿ

ಇಂದುಮುಖಿ ಕೇಳಿದೆಯ ಗಂಗಾ । ನಂದನನು ಬೆಸಸೀ ದುರ್ಯದನುಪೂ । ರ್ಣೇಂದುವದನನ ಬಿಡಿಸು ಬಿಡಿಸೆನುತೆಂದನಿಂತೆನುತ ॥ ನೋಂದನಕಟ ಕಟಾ ಧರಾಧಿಪ । ನಿಂದುನೋಡುವದ್ಯಾಕೆ ಬಿಡಿಸೆನೆ । ಮಂದಗಾಮಿನಿ ನಗುತ ಕೌರವಗೆಂದಳೀಮಾತ ॥೧॥ ॥೨೫೩॥

ರಾಗ ರೇಗುಪ್ತಿ-ಅಷ್ಟತಾಳ

ಬಳಲಿದೆಯ ಎಲೆ ಭಾವ । ಬಹು । ಕಳವಳಿಸುವದೀಗಲೆನ್ನಯ ಜೀವ । ತಲೆಯ ತಗ್ಗಿಸಿಕೊಂಡು ಮಲಗದೆ ತೋರಿಸು । ನಳಿನ ಬಾಂಧವನಂತೆ । ಪೊಳೆವ ನಿನ್ನಾಸ್ಯವ ॥೧॥ ಕೃತ್ರಿಮ ವಿದ್ಯದಿ ಧೀರ । ಸಾಧು । ಸತ್ಯವಂತರ ಗೆಲಲಿಕೆ ಬಲು ಶೂರ । ಮತ್ತೆ ನಿನ್ನನು ಪೋಲುವಂತಹ ಸುಭಟರ । ಧಾತ್ರಿ ಮೂರರೊಳು ಮತ್ಯಾರಿಲ್ಲ ವಿದುಧಿಟ ॥೨॥ ವರ ಖಚರಾಧಿಪ ಬಿಗಿದ । ನೇಣಿ । ನುರಿಯು ಮಾಜದೆ ಮತ್ತೆ ನಿನ್ನ ಬಂಧಿಸಿದ । ದುರುಳರ್ಯ್ಯಾರೆಂಬುವ ಪರಿಯ ನೀನೆನ್ನೊಳು । ಅರುಹು ನಾಚುವದ್ಯಾಕೆ ಕುರುಕುಲಾಧೀಶಾ ॥೩॥ ಹರಹರ ನಿನ್ನ ನೀಕ್ಷಿಸಲು ।। ತನು । ಕರಗಿ ನೋಯುವದೀಗ ಲೆನಗೆ ನೀ

Scanned by CamScanner

ಕೇಳು । ಧರಣಿಪಾಲಕ ನಿನಗೆಷ್ಟುನೊಂದಿತೊ ತನು । ನೆರೆಪ್ರಾಕೃತದ ಫಲವೆಂದಳು ನಳಿನಾಕ್ಷಿ ॥೪॥ ಬಿಡು ಮರುಳಾಟಗಳನ್ನು । ಮುಂದೆ । ಬಿಡದಿರು ಸನ್ಮಾರ್ಗವೆಂಬ ದಾರಿಯನು । ತೊಡಕುಗಳ್ ಬಾರದೆಂದೆನುತಲಾ ಸುದತಿಯು । ಬಿಡಿಸಿದಳ್ ವಾಮಹಸ್ತದೊಳಾಪಾಶವ ॥೫॥

ವಾರ್ಧಿಕ

ಸರಸಿಜಾಕ್ಷಿಯ ವಚನ ಶರವು ನೃಪನಂ ಬಿಡದೆ । ಕೊರೆಯೆ ಕರ್ಣಾಂತದೋಳ್ ಮರುಗಿ ತನ್ನಯ ಮನದಿ । ಭರದೊಳಲ್ಲಿಂದೆದ್ದು ಪೊರಟು ಕಾಂತಾರದೋಳ್ ತೆರಳಿದಂ ತಾನೋರ್ವನೇ ॥ ತರಣಿಜಾತ್ಮಜನೊಡನೆ ಬೀಳ್ಕೊಂಡು ಧೃತರಾಷ್ಟ್ರ । ಸುರನದಿಜರೀರ್ವರುರೆ ಪುರಕೈದಲಿತ್ತಲಾ । ಕುರುನೃಪಾಲನು ಘೋರ ಕಾಂತಾರದೊಳಗಾಗ ಪರಮಶೋಕದೊಳೆಂದನು ॥೧॥ ॥೨೫॥

ರಾಗ ನೀಲಾಂಬರಿ-ರೂಪಕತಾಳ

ಹರಹರ ಎನ್ನಯ ವಿಧಿಯೆ । ತರುಣಿಯರೆನ್ನಯ ಮಾನವ । ಪರಿಭವಿಸಿದರೆಂದೆನುತಲಿ । ಪೊರಳುತ ನೆಲದೊಳಗೆ ॥೧॥ ಯಾತಕೆ ಸುದತಿಯ ಗೋಸುಗ । ನೀತಿಯನುಸುರಿದ ತಾತನ । ಮಾತನು ಮೀರುತ ಪೋಗ । ಲ್ಕೀತೆರವಾಯ್ತೆನುತ ॥೨॥ ಪೇಳುವದಿನ್ಯಾರೊಡನೆ । ಬಾಳುವೆನೆಂತೈ ಹರನೆ । ಕೇಳುವಾಹರಾನೆನ್ನನು । ಪಾಲಿಸು ಶಂಕರನೆ ॥೩॥

ಭಾಮಿನಿ

ಇದಕುಪಾಯವ ಗೈದುದುಷ್ಟರ । ಮದವ ಹೀರುವೆನೆನುತ ಚಿಂತೆಯ । ನೊದೆದು ರೋಷದಿ ಶಿಂದುದೇಶಕೆ ಬಂದನವನೀಶ ॥ ಬೆದಬೆದನೆ ಬಂದೀತ ಸೈತರು । ವದನು ಕಂಡಾ ಶಿಂಧುಪಾಲನು । ಇದಿರುಗೊಂಡೈದಿವನನುಪಚರಿಸುತ್ತಲಿಂತೆಂದ ॥೧॥

ರಾಗ ಭೈರವಿ-ಝಂಪೆತಾಳ

ನಳಿನಬಾಂಧವನುದಯಕೈತಪ್ಪ ಬೆಡಗಿನೊಳು । ಪೊಳೆವ ನಿನ್ನಾನನದ ಸಿರಿಯು । ಖಳಕುಲಾಗ್ರಣಿ ರಾಹುಸ್ಪರ್ಶದಂತಾಯ್ತೇತ । ಕಳುಕದೆನ್ನೊಡ ಯಾರಿಲವೊ ಬರಿದೆ ನಿನ್ನನು ಕೆಣಕಿ ಭಂಗಿಸಿದ । ಚೋರನೀಗ ಪೇಳು ॥೧॥

ರ್‍ಯಾರೆಂಬುದೆನಗರುಹು । ಚಾರುಹುಲ್ಲೆಯು ಗರ್ವದಿಂದ ಕೇಸರಿಯ ಮಂ । ಶೂರನಂ ಕೆಣಕಿದಂತಾಯ್ತು ॥೨॥ ಸುರರೊ ದಾನವರೊ ಪನ್ನಗರೊ ಯಕ್ಷರೊ ಮೇಣು । ವರಸಿದ್ಧಸಾಧ್ಯಕರೊ ಪೇಳು । ಗರುಡರೋ ಖೇಚರರೊ ನೆರೆನಿನ್ನ ಕೆಣಕಿದರ । ಉರವ ಬಗೆಯುವೆನು ಪೇಳೆಂದ ॥೩॥ ಶಂಕರನೊಳಭಯಮಂ ಪಡೆದು ಆಡಗಿರಲಿ ವರ । ಪಂಕಜಾಕ್ಷನ ಮರೆಯ ಹೋಗಲಿ । ಶಂಕೆಯಿಲ್ಲದೆ ನೂರಜುಗಳ ತರಿದು ಎನ್ನಾಳು । ಬಿಂಕಮಂ ತೋರ್ಪೆನೆನಲೆಂದ ॥೪॥

ರಾಗ ಕಾಂಬೋಜ-ತ್ರಿವುಡೆತಾಳ

(ಯಾರಿಗಿಷ್ಟುಪಚಾರವೈ ಪಾರ್ವತಿಪತಿ ಎಂಬಂತೆ)

ಅವನೀಪ ಶಿಂಧುರಾಯ । ಕೇಳೆನ್ನಯ । ಭವಣೆಯ ಪೇಳ್ವೆನಯ್ಯ । ಹವಣಿಸುತಲಾ ಘೋಷಯಾತ್ರೆಯ । ನೆವದಿ ಕಾನನಕೈದಿ ಬಿಡದಿಯ । ತವಕದಿಂ ರಚಿಸುತ್ತ ಮೃಗಗಳ । ನಿವಹವನು ಬೇಟೆಯಲಿ ತರಿದೆವು ॥೧॥ ಜಲಕ್ರೀಡೆಗೆಂದೆನುತ । ನಾವತಿ ತೋಷ । ದಲಿ ಸ್ತ್ರೀಯರೊಡಗೂಡುತ್ತ । ಬಳಿಕ ಯಕ್ಷರ ವನದೊಳಗೆ ಪೋ । ಗಲು ಪರಾಕ್ರಮದಿಂದ ಚಾರರು । ಛಲದಿ ಬಾಗಿಲ ತಡೆಯುಲವರನು । ಕಲಹದೊಳಗೆಮ್ಮವರು ಗೆಲಿದರು ॥೨॥ ಪೇಳಿದರೊಡೆಯನೊಳು । ಚಾರಕರಾಗ । ಘೋಳಿಟ್ಟು ಶೋಕದೊಳು । ಕಾಳಗಕೆ ನಡೆತಂದರೈ ಖಚ । ರಾಳಿಯನು ಸೋಲಿಸುತ ನಮ್ಮವ । ರಾಳುತನ ಮೇಲಾಗೆ ಖಚರರ । ಪಾಲನಾಗಿಹ ಚಿತ್ರಸೇನನು ॥೩॥ ನಡೆತಂದ ಘುಡುಘುಡಿಸಿ । ಬಂಧಿಸಿದನು । ಒಡನೆಮ್ಮ ಭೋರ್ಗುಡಿಸಿ । ತಡೆದು ಸುರಪಜನೆಮ್ಮ ತರಲಾ । ಜಡಜಮುಖಿವಸನದ ನೆವನದೊಳು । ಬಿಡುತ ವಚನ ಕಠೋರ ಶರವನು । ಬಿಡಿಸಿರುವಳೈ ಅರಿಗಳಿದಿರಲಿ ॥೪॥

ವಾರ್ಧಿಕ

ಅಂಬುಜಾಕ್ಷಿಯು ವಚನವೆಂಬ ಕೂರ್ಗಣೆಯು ಎ । ನ್ನಂ ಬಿಡದೆ ಕೊರೆಕೊರೆಯೆ ಕಂಬನಿಯು ತುಂಬಲಾ । ಅಂಬುಜೋದ್ಭವನ ತನುಜಂ ಬಂದು ಪೇಳ್ದನತಿಡಂಭಕದ ಮಾತುಗಳನು ॥ ಬೆಂಬಲಕೆ ಕರ್ನಾದಿ ಸುಭಟರೊಡಗೂಡಿ ಬಲು । ಸಂಭ್ರಮದಿ ಪೊರಮಟ್ಟು ಮಣಿನಗರ ಕೈದುತಾ । ಅಂಬುಜಾನನೆ ಸುಭದ್ರೆಯ ತುಡುಕಲನಳೆನ್ನ ಉರಗಪಾಶದಿ ಬಿಗಿದಳು ॥೧॥೨೭॥

Scanned by CamScanner

ರಾಗ ಮಧುಮಾಧವಿ-ತ್ರಿವುಡೆತಾಳ

ಗೆಲಿದರ್ಸೈ ಮಿಕ್ಕುಳಿದ ಸುಭಟರ । ಛಲದಿ ಬಾಲಕರೀರ್ವರು । ತಿಳಿದು ಮುಮುಪಿತ ಶಂತತನಯರು । ಒಲವಿನಿಂದ ॥೧॥ ಬಂದು ಬಬ್ರುವಹನನ ಸನುಮತ । ದಿಂದ ತೋಷದೊಳೆನ್ನನೂ । ತಂದು ಕಾಮ್ಯಕ ವಿಪಿನದೊಳು ಯುಮು । ಕಂದನೆಡೆಗೆ ॥೨॥ ಇಂದುಮುಖಿ ದ್ರೌಪದಿಯೆ ಬಿಡಿಸೆನೆ । ಮಂದ ಗಾಮಿನಿ ಕರವನು । ಬಂದು ಬಿಡಿಸಿದಳೆನ್ನ ಬಹುಪರಿ । ಯಿಂದ ಜರೆದು ॥೩॥

ಭಾಮಿನಿ

ಸೃಷ್ಟಿಪತಿಯಿಂತೆನಲು ಕೇಳುತ । ಸಿಟ್ಟಿನಿಂ ಸೈಂಧವನು ಪೇಳ್ದನು । ಭ್ರಷ್ಟ ಮಾನುನಿಯನ್ನು ಪಿಡಿದೆಳೆತಹೆನು ನಾ ಪೋಗಿ ॥ ಇಷ್ಟು ಚಿಂತೆಗಳ್ಯಾಕೆ ಪರಿಕಿಸು । ಕಷ್ಟವೆನಿತಾದರೆಯು ತಾರದೆ । ಬಿಟ್ಟುಬಾರೆನು ವನಿತೆಯನು ತಾ ನೆಸುತ ಗರ್ಜಿಸಿದ ॥೧॥

ವಾರ್ಧಿಕ

ತರಿಸಿದಂ ಹದಿನಾರುಸಾವಿರ ಗಜಾಳಿಯಂ । ನೆರಹಿದಂ ಐವತ್ತುಸಾವಿರ ತುರಂಗಮಂ । ವರಹೇಮ ಮಯರಥವ ಹದಿನಾಲ್ಕು ಸಾವಿರವ ನುರುತರಾ ನಂದದಿಂಡ ॥ ಕರೆಸಿದಂ ಚರಣಚಾಪಟರೈದುಲಕ್ಷಮಂ । ಬರಿಸಿ ಭೇರಿನಗಾರಿ ಕಹಳೆತಮ್ಮಟೆಗಳಂ । ಪರಿಪರಿಯ ವಾದ್ಯಘೋಷದಿ ಅಷ್ಟಕುಂಜರಗಳುರವು ತಲ್ಲಣಿಸುವಂತೆ ॥೧॥

ರಾಗ ಕೇದಾರಗೌಳ-ಝಂಪೆತಾಳ

ಅಂದು ಸೈಂಧವ ಪೊರಡಲು । ಜೋಯಿಸರು । ನಿಂದು ಪೇಳಿದರಾ ಗಲು । ನಿಂದಿಹರು ರವಿಭೌಮರು । ಅಶುಭದೆಸೆ । ಗಿಂದು ಸಟೆಯಲ್ಲ ಕೇಳು ॥೧॥ ಶನಿ ರಾಹು ಗುರು ಶುಕ್ರರು । ವಿಷಮ ಫಲ । ವನು ಕೊಡುವ ರಾಗೀರ್ಪರು । ಅನುಚಿತವು ನೀವ್ ಪೋಪುದು । ಪಾಂಡವರೊಳ್ । ಅನು ವರದಿ ಜಯ ಸಿಕ್ಕದು ॥೨॥ ಎಂದ ಮಾತನು ಕೇಳುತ । ಲವರುಗಳ । ನಿಂದಿಸುತ ಗದರಿಸುತ್ತ । ಚಂದದಿಂ ಪೊರಟನಾಗ । ಬಲಸಹಿತ । ಸೈಂಧವನು ವನಕೆ ಬೇಗ ॥೩॥

ಭಾಮಿನಿ

ಉರಿಹೊಗೆಯೆ ದಿಕ್ಕಿನಲಿ ಹಕ್ಕಿಗ। ಳೊರಲಿದವು ನಾನಾ ದೆಸೆಗಳಲಿ। ದುರುಳನದ ಕೈಕೊಂಬನೇ ತನ್ನವರ ಸಂತೈಸಿ ॥ ಭರದ ಪಯಣದ ಮೇಲೆ ಪಯಣದ। ಲುರವಣಿಸಿ ನಡೆತಂದು ಪಾಂಡವ। ರರಸನಿಹ ವಿಮಲಾಶ್ರಮದ ವಿಪಿನೋಪಕಂಠದಲಿ ॥೧॥ ॥೨೮೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ಬಂದು ವನದೊಳಗೆಲ್ಲರಿಗೆ ಬಲು। ಮಂದಿರಗಳನು ರಚಿಸಿಕೊಂಡಿರೆ। ಸಿಂಧುದೇಶಾಧಿಪನು ಚರರೊಡ। ನೆಂದನಾಗ ॥೧॥ ಸಾನುನಯದಲಿ ಆಭರಣಗಳ। ನಾನು ಕೊಟ್ಟಿಹೆನೆನುತ ಕೊಡುವುದು। ಕಾನನದೊಳಿಹ ಪಾಂಡುಪುತ್ರರ। ಮಾನಿನಿಯೊಳು ॥೨॥ ಎನುತಲಾಭರಣಗಳ ಕೊಟ್ಟಿಹ। ಜನಪನಂಘ್ರಿಗೆ ನಮಿಸಿ ಚಾರರು। ಮನದಿ ಹರುಷಿತರಾಗಿ ತೆರಳಲು। ಕಾನನ ನಲಿ ॥೩॥

ವಾರ್ಧಿಕ

ಜನಪ ಕೇಳಾಶ್ರಮದೊಳಿರುತಿರುವ ಪಾಂಡವರು। ವನದಿ ಮೃಗಬೇಟೆಯಾಡುವ ಮನವ ಮಾಡುತಲಿ। ವನಿತೆ ದ್ರೌಪದಿಯ ಧೌಮ್ಯರ ಆಶ್ರಮದೊಳಿರಿಸಿ ಮುನಿಜನಗಳಿಗೆ ವಂದಿಸಿ ॥ ಧನುಶರಗಳಂ ಪಿಡಿದುಕೊಳುತಾಗ ಭರದಿ ಕಾ। ನನದಿ ತೆರಳುತ ದೆಸೆದೆಸೆಗೆ ಪೋಗುತಿರಲಾಗ। ಘನವೇಗ ಬರುತಲಾ ಚರರು ದ್ರೌಪದಿಗೆರಗಿ ವಿನಯದಿಂ ಪೇಳ್ದರಾಗ ॥೧॥

ರಾಗ ಮಧ್ಯಮಾವತಿ-ಏಕತಾಳ

ತಾಯೆ ಲಾಲಿಸು ನಾವು ಪೇಳ್ವುದನೆಲ್ಲ। ಮಾಯಕವಲ್ಲಿದು ಕೇಳೆಮ್ಮ ಸೊಲ್ಲ ॥ ರಾಯ ಸೈಂಧವ ನಿಮ್ಮ ಕಷ್ಟಗಳರಿತು। ನ್ಯಾಯವಾಗಿಯೆ ಕಳುಹಿದ ವಸ್ತುವಿನಿತು ॥೧॥ ಮೋದದಿಂದೆಲ್ಲವ ಪಡೆಯಲು ನೀವು। ಆದರದಿಂದಲಿ ತೆರಳ್ವೆವು ನಾವು ॥ ಖೇದಗೊಳ್ಳದಿರೆಂದು ಚರರು ಪೇಳ್ತಿರಲು। ಆ ದ್ರುಪದನ ಜಾತೆ ಪೇಳ್ದಳವರೊಳು ॥೨॥

ಭಾಮಿನಿ

ಚರರ ನುಡಿಯನು ಕೇಳಿ ದ್ರೌಪದಿ। ಪರಮ ಹರುಷದಲುಪಚರಿಸು

Scanned by CamScanner

ತಲಿ । ಪರರೊಡವೆಗಳು ಪತಿವ್ರತೆಯರಿಗೆ ಆವ ಕಾಲದೊಳು ॥ ಸೇರುವುವೆ ನೀವಿದನು ಪಾಂಡು ಕು । ಮಾರರಿಗೆ ತೋರಿಸುವುದೇ ಬೀ । ಡಾರವನು ಬಿಡಿ ಬೇರೆ ವನದೊಳಗೆಂದಳಿಂದುಮುಖಿ ॥೧॥ ಉಸುರುತಿರಲಾ ನಮ್ಮ ಕಾರ್ಯ್ಯದ । ಬೆಸುಗೆ ಹತ್ತದೆನುತ್ತ ಮುಖದಲಿ । ರಸವ ತೋರದೆ ಬಂದು ಹೊಕ್ಕರು ತಮ್ಮ ಪಾಳಯುವ ॥ ಉಸುರಲಮ್ಮೆವು ಜೀಯ ಸೋಲಳು । ಶಶಿ ವದನೆ ಕಾರ್ಯ್ಯವನು ನೀವ್ ಸಾ । ಧಿಸುವುದೆನೆ ನೋಡುವೆನೆನುತ್ತಲಿ ಪೊರಟ ನಾಕ್ಷಣಕೆ ॥೨॥

ರಾಗ ಕೇದಾರಗೌಳ-ಅಷ್ಟತಾಳ

ಜನಪ ಕೇಳೆಲೊ ಸಿಂಧುಭೂಪನು ತನ್ನಯ । ಮನದಿ ಸಂಶಯುವ ತಾಳಿ । ವಿನಯದಿ ಶ್ರಂಗರಿಸುತ್ತಲಿ ಪೊರಟನು । ಘನತರ ವೈಭವದಿ ॥೧॥ ಖಳಕುಲತಿಲಕನು ಆಶ್ರಮದೆಡೆಯಲಿ । ಸುಳಿಯುತ್ತಲಿರುತಿರಲು । ತೊಲಗಿತು ಮುನಿವೃಂದವಾಗಲೆ ಪಾಂಚಾಲೆ । ಯನು ನುಡಿಸಿದನಾಗಲು ॥೨॥ ॥೨೯೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ನಳಿನಮುಖಿ ನೀ ಬೆದರಬೇಡಲೆ । ಹಲವನೆಣಿಸದೆ ಎನ್ನೊಡನೆ ನೀ । ಸಲುಗೆಯಿಂದಲಿ ಮಾತನಾಡಲೆ । ಪುಳಿನಜಘನೇ ॥೧॥ ಲಲನಾಮಣಿ ನಿನ್ನಂತೆ ಸ್ತ್ರೀಯರು । ಹೊಳಲೊಳಿಲ್ಲವು ಕಾಣೆ ಧಿಟವಿದು । ಚೆಲುವೆ ಬಾರಲೆ ಮುದವ ತೋರೆಲೆ । ಜಲಜನಯನೆ ॥೨॥ ಎಂದು ಈ ಪರಿಯಿಂದ ಪೇಳ್ತಿರ । ಲಂದು ದ್ರೌಪದಿ ನುಡಿದಳೆನ್ನಯ । ಮಂದಿರದೊಳೆನ್ನರಸರಿಲ್ಲದ । ರಿಂದ ನಾನು ॥೩॥ ಸದನದಲಿ ಪತಿ ಇಲ್ಲದಿರುತಿರೆ । ಸದಮಲೆಯು ಪತಿವೃತೆಯು ನುಡಿಸಲೇಕೈ ॥೪॥ ಅಹಹ ನಿನ್ನಂ । ದದ ಪಿಶಾಚಿಯ ಕುಹಕಿಯನು ನಾ । ಮಹಿಳೆ ಸೂಳೆಯು ಪತಿ ವೃತೆಯು ತಾ । ನಹಳೆ ಪೇಳೈ ॥೪॥ ಎಂದು ಈ ಪರಿಯಿಂದ ಲಂಧಕ । ಪಾತಿವೃತ್ಯವತಿ ಸ । ನ್ನಿಹಿತವಲ್ಲಾ ನಿನಗೆ ಹಲಬರ । ನಂದನೆಯು ಪತಿಯಾಗ ದ್ರುಪದನ । ನಂದನೆಯು ಪಿಡಿಯುವೆನೆನುತ್ತಲಿ । ಮುಂದೆ ಬರಲು ॥೬॥ ॥೨೯೨॥

ಬಾಮಿನಿ

ತರಳೆ ತಲ್ಲಣಿಸುತ್ತ ಭೂಪಗೆ । ಪರಿಪರಿಯ ನೀತಿಗಳ ಪೇಳ್ದರು । ಬರ

ಸೆಳೆದು ತುರುಬಿಂಗೆ ಕೈಯಿಕ್ಕುತ್ತ ಉಸುರಿದನು ॥ ಒರಲಿದಳು ಹಾಭೀಮ ಹಾನೃಪ । ವರ ಧನಂಜಯ ಹಾಯೆನುತ ಕಾ । ತರಿಸೆ ಕಮಲಾನನೆಯು ಕಂಠವನೊತ್ತಿ ಹೊರವಂಟ ॥೧॥ ಚೆಲ್ಲಿತಾ ಮುನಿಯೂಥ ದೆಸೆದೆಸೆ । ಗಲ್ಲ ಹರಿದುದು ಬಾಯ ಮೊರೆಗಳ । ಪಲ್ಲವದ ಪಾಣಿಗಳ ತೋರುವ ಸಮಿಧೆ ದೂರ್ವೆಗಳ ॥ ತಲ್ಲಣದ ತೋಪಿನ ವಿಷಾದದ । ವಲ್ಲರಿಯು ಹೂದೊಡಬೆಗಳ ಹೊ । ಯ್ದಳೆಗಳ ಮುನಿಜನವ ಕಂಡರು ಬರುತ ಪಾಂಡವರು ॥೨॥

ಕಂದ

ಜನಪತಿ ಧರ್ಮಜ ಬರುತಲಿ । ಮುನಿಜನಗಳಿಂದರಿಯುತ ನಿಜಸಂಗತಿಯಂ । ಅನುಜರೋಳ್ಪಾರ್ಥನ ಮತ್ತಾ । ಅನಿಲಜನ ಕರೆಯುತ ಪೇಳ್ದನವ ನಿಂತೆನುತಂ ॥೧॥

ರಾಗ ಕೇದಾರಗೌಳ-ಝಂಪೆತಾಳ

ಅನುಜರಿರ ಕೇಳಿರೀಗ । ದ್ರುಪದ ನಂ । ದನೆಯ ಕೊಂಡ್ಯೊದನೀಗ । ಘನವೇಗದೊಳು ಪೋಗುತ । ಸಿಂಧುನೃಪ । ನನು ಕರೆದು ಮಾತಾಡುತಾ ॥೧॥ ಒರೆದು ಸದ್ಧರ್ಮವನ್ನು । ಕೇಳದಿರೆ । ಜರೆದು ಸಂಗರದೊಳಿನ್ನು । ಮುರಿದು ವೈರಿಯ ಬಲವನು । ತರುಣಿಯನು । ಕರೆತಹುದು ತೆರಳಿರಿನ್ನು ॥೨॥ ಎಂದ ಮಾತನು ಕೇಳುತ । ಕಡುಕ್ರೋಧ । ದಿಂದ ಭೀಮನು ಪೊರಡುತ । ಇಂದ್ರ ನಂದನನು ಸಹಿತ । ಬರುತಾಗ । ಇಂದುಮುಖಿಯನು ಅರಸುತಾ ॥೩॥ ದೂರ ದಲಿ ಬರುತಲಾಗ । ಕಾಣುತಲಿ । ವೈರಿ ಮಾರ್ಬಲವ ಬೇಗ । ಶೂರತನದಲಿ ಶರವನು । ಬಿಡುತಾಗ । ತೋರಿದರು ನಿಜಬಲವನು ॥೪॥ ಸೆಣಸಿ ಶಡು ರಥರುಗಳನು । ಫಲುಗುಣನು । ರಣದಿ ಹಿಮ್ಮೆಟ್ಟಿಸಿದನು । ಅಣಕವಿಲ್ಲದೆ ಕಾದಿದ । ಅಮಿತಕ್ಷೋ । ಹಿಣಿಯ ಸೈನ್ಯವ ಕೆಡಹಿದ ॥೫॥

ಭಾಮಿನಿ

ಕಾಣುತಲಿ ಕಲಿಪಾರ್ಥ ಭೀಮರ । ಕ್ಷೋಣಿಪತಿ ಕೌರವನ ಅನುಜೆಯ । ಪ್ರಾಣವಲ್ಲಭನೆಂದ ಸೈನಿಕರೊಡನೆ ತಲ್ಲಣಿಸಿ ॥ ಜಾಣತನದಲಿ ತೋರಿನಿಮ್ಮಯ । ತ್ರಾಣವನು ನೀವೆನಲು ಭುವನ । ಪ್ರಾಣಸುತ ಬಂದಿದಿರು ನಿಲ್ಲುತ ಪೇಳ್ದನವನೊಡನೆ ॥೧॥

॥೩೦೬॥

ರಾಗ ಆಹೇರಿ-ಏಕತಾಳ

ಎಲವೊ ಸಿಂಧುದೇಶದಧಿಪ ಕೇಳು ಕೇಳೆಲಾ । ಲಲನೆಯನ್ನು ಬಿಟ್ಟು ಕೆಲಕೆ ಸಾರು ಸಾರೆಲಾ ॥೧॥ ಭೃಷ್ಟಾ ಪೋಪುದೆಲ್ಲಿ ಕಂಡು ಬಹುವಿಕಾರದಿ । ಕುಟ್ಟಿ ಕಳೆವೆನಿನ್ನನೀಗ ಸಮರ ಮಧ್ಯದಿ ॥೨॥ ಭಳಿರೆ ಭೀಮ ನುಡಿಯ ಬೇಡ ತಾಳು ತಾಳೆಲಾ । ಘಳಿಲ ನೆನ್ನ ಬಲವತೋರ್ಪೆ ನೋಡು ನೋಡೆಲಾ ॥೩॥ ಎನುತ ಬಲು ಶರೌಘವನ್ನು ಎಸೆಯೆ ಭೀಮನು । ಮನದಿ ಹರುಷ ತಾಳುತಾಗ ತರಿದು ಬಿಸುಟನು ॥೪॥ ದುರುಳ ನಿಲ್ಲುನಿಲ್ಲೆನುತ್ತ ಪವನ ಜಾತನು । ಉರುತ ರಾಸ್ತ್ರದಿಂದಲವನ ಉರವನೆಚ್ಚನು ॥೫॥ ಬರುವ ಶರವ ತರಿಯೆ ಭೀಮ ನೋಡುತವನನು । ಅರರೆ ಧೀರನಹುದೆನುತ್ತ ಪೇಳ್ದನಾತನು ॥೬॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ಭಳಿರೆ ಭಾಪುರೆ ಶೂರನಾಗಿಹೆ । ಕೊಳುಗುಳದಿ ನೀನೆನುತ ಭೀಮನು । ಛಲದಿ ಸರಳನು ಬಿಡಲಿಕಾಪರ । ಬಲದ ನೃಪನ ॥೧॥ ಕರದಚಾಪವು ಕಡಿದು ಪೋಗಲು । ಕರಗಿ ಮನದಲಿ ಸೈಂಧವನು ತಾ । ನಿರದೆ ರಥದೊಳಗಿಂದಲಿಳಿದನು । ಧರಣಿಗಾಗ ॥೨॥ ಕಂಡು ಭೀಮನು ಗರುಢ ಸರ್ಪದ । ಮಂಡೆಗೆರಗುವ ಓಲು ಜಗದತಿ । ಭಂಡನಾಗಿಹ ಸೈಂಧವನತಾ । ದಿಂಡು ಗೆಡಹಿ ॥೪॥೩೧೫॥

ಭಾಮಿನಿ

ಖಳನ ಬಾಹುವ ನೊದೆದು ತುರುಬಿಗೆ । ನಿಲುಕಿ ಕುಸುಬಿದನವನ ಗೋಣಿನ । ಲಲಗ ಹೂಡಲು ಕಂಡನರ್ಜುನನಾ ವೃಕೋಧರನ ॥ ಕೊಲ ದಿರಕಟಾ ಕುರುಕುಲದ ದು । ಸ್ಸಳೆಯ ರಮಣನನೆಂದು ಪೇಳುತ । ಫಲುಗುಣನು ಮಾರುತಿಯ ಸಂತವಿಸಿದನು ವಿನಯದಲಿ ॥೧॥ ವೈರಿ ಬಾಹುದ್ವಯವ ಬದ್ಧಗೆ ದಾರದಲಿ ಕಟ್ಟಿದನು ನಾರೀ । ಚೋರ ನಡೆ ನಡೆಯೇನುತ ತಿವಿದನು ಬಿಲ್ಲ ಕೊಪ್ಪಿನಲಿ ॥ ಕೌರವೇಂದ್ರನ ಮತವೊ ನಿನ್ನ ವಿ । ಕಾರವೋ ಹೆಂಗಳ್ಳವಿದ್ಯೆಯ । ನಾರು ಕಲಿಸಿದರೆನುತ ತಂದರು ಧರ್ಮಜನ ಹೊರೆಗೆ ॥೨॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ಪಾದಬಳಿಯಲಿ ಕೆಡಹುತಾ ಬಕ । ಸೂದನನು ಖಡ್ಗವನು ನೆಗೆಯಲು ಆ ದಯಾನಿಧಿ ಧರ್ಮಜನು ತಡೆ । ದೆಂದನಾಗ ॥೧॥ ಕದನದಲಿ ಸೆರೆಹಿಡಿದವರ

Scanned by CamScanner

ಕೊಲು । ವುದು ನರೇಂದ್ರರ ಧರ್ಮವಲ್ಲೆಂ । ಬುದನು ನುಡಿಯಲು ಮುನಿಪ ಧೌಮ್ಯರು । ನುಡಿದರಾಗ ॥೨॥ ಮಾನ ಧನರಿಗೆ ವಧೆಯೆಸಿಪುದಭಿ । ಮಾನ ಭಂಜನವಿವನು ಕಟ್ಟಭಿ । ಮಾನಿ ಭಂಜಿಸಿ ಬಿಟ್ಟೊಡೀತಂ । ಗಿನ್ನು ಮರಣ ॥೩॥ ಅದನು ಕೇಳುತ ಭೀಮ ಮಾಡಿದ । ಹದನದೇನೆಂಬೆನು ಮಹಾದ್ಭುತ । ವದನು ಕೇಳ್ಕೈ ಖಡುಗದಲಿ ಬಾ । ಚಿದನು ಮುಡಿಯ ॥೪॥ ಬಿಟ್ಟರೀತನ ತೋಳ ಹಿಂಗೈ । ಗಟ್ಟುಗಳನೆಲೆ ಕುನ್ನಿಹೋಗೆನೆ । ಕೆಟ್ಟ ಮನದಲಿ ನಡೆದ ನಾಗಲೆ । ನಟ್ಟಡವಿಲಿ ॥೫॥ ಬೆಟ್ಟದಿಂದುರುಳುವೆನೊ ಹಾಸರೆ । ಗಟ್ಟಹೊಗು ವೆನೊ ಮಡುವನೆನುತಡಿ । ಯಿಟ್ಟ ನಂತಃಕಲುಷಚಿತ್ತನು । ದು ಷ್ಟ ನೃ ಪ ನು ॥೬॥

॥೩೨೩॥

ಭಾಮಿನಿ

ಚಿಂತಿಸಿದೊಡೇನಹುದು ಹೊಗುವೆನು । ಕಂತು ಮಥನನ ಮರೆಯ ನಿವದಿರಿ । ಗಂತಕನು ತಾನಹೆನು ಗೆಲುವೆನು ಬಳಿಕ ಭವರದಲಿ ॥ ಭ್ರಾಂತಿ ಯನು ಬಿಡುತಾಗ ನೃಪ ತ್ರಿಪು । ರಾಂತಕನ ಧ್ಯಾನದಲಿ ವಿಮಲ ಸ್ವಾಂತ ನೇಕಾಗ್ರದಲಿ ಭಜಿಸಿದನಿಂದು ಶೇಖರನ ॥೧॥

ಕಂದ

ಪರಿಪರಿಯಿಂದಲಿ ಧ್ಯಾನಿಪ। ನರಪತಿಯನು ಕಾಣುತ ಪುರಹರಮನ ನೋಳ್ ಹರುಷವತಾಳುತ ಲಾತನ। ಕರೆಯುತ ಪೇಳಿದ ನವನೊಡ ನಾಗಿಂತೆನುತಂ ॥೧॥

ರಾಗ ನವರೋಜು–ಏಕತಾಳ

ಸಿಂಧೂ ದೇಶದ ಒಡೆಯ । ನಾ । ನಿಂದು ಪೇಳುವ ನುಡಿಯ । ಚಂದ ದೊಳಾಲಿಸು ನಿನ್ನ ಮನದೊಳಿಹು । ದೊಂದನು ಬಿಡದೆನ್ನ । ಮುಂದೆ ಸೀನರು ಹೀಗಾ ॥೧॥ ಸಾಕು ಸಾಕೀತಪವು ನಾ । ಸಾಕಾರನಾಗಿಹೆನು । ಬೇಕಾದ ವರಗಳ ಬೇಡು ಕೊಡುವೆನೆನೆ । ಆ ಕುಮತಿಯು ಪೇಳ್ದ ಲೋಕ ದೊಡೆಯ ನೊಳು ॥೨॥

॥೩೨೭॥

ವಾರ್ಧಿಕ

ತಾರೆಪತಿ ಪಿತನಸುತಗಿತ್ತ್ರ ಶರವನು ನೀನು । ತಾರೆಯುರಸನನು ಶಿರದಲಿ ಪೊತ್ತ್ರ ಈರ್ಾರು । ತಾರೆಪತಿ ಮಾತೆಯಃಗ್ರಜನ ಸುತನಾತ್ಮಜನ ಸಖಿಪಿತನ

ಪುರವ ಕಾಯ್ದೆ ॥ ವೀರಪಾಂಡವರ ನೊಂದೇದಿನದಿ ಗೆಲುವವರ। ಕಾರುಣ್ಯದಿಂ ಕೊಟ್ಟು ಸಲಹೆನ್ನ ನಿನ್ನಪದ। ವಾರಿಜಂಗಳನು ನಂಬಿಹೆನೆನುತ ಮತ್ತೆ ಖಳ ನೆರಗಿದನು ಹರನಪದಕೆ ॥೧॥

ಭಾಮಿನಿ

ಪಾಶುಪತ ಶರವೆನ್ನ ಸತ್ವ ವಿ। ಳಾಸವಡೆ ಫಲುಗಣನ ಕೈಯಲಿ। ವಾಸವಾಬ್ಜ ಭವಾದಿ ಸುಭಟರ ಬಗೆಯಡಾ ಹವಕೆ। ಆ ಸುಭಟನೊಬ್ಬನ ನುಳಿಯೆ ಮಿ। ಕ್ಕೇಸುಪಾಂಡವರುಗಳನೊಂದೇ। ವಾಸರದ ಲವಗಡಿಸು ಹೋಗೆಂದನು ಮುಖಧ್ವಂಸಿ ॥೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ

ಇಂದು ಧರನೆಂದುದನು ಕೇಳುತ। ಸಿಂಧು ದೇಶಾಧಿಪನು ಮನದೊಳ। ಗಂದು ಹರುಷವತಾಳಿ ನುತಿಸುತ। ಲೆಂದನಾಗ ॥೧॥ ಪನ್ನಗಾರೀಧ್ವಜನ ಸಖನೇ। ಸನ್ನುತನೆ ನಿನ್ನಯುದರುಶನದ। ಲೆನ್ನ ಪಾತಕವೆಲ್ಲ ಪೋದುದು। ಧನ್ಯನಾದೆ ॥೨॥ ಜೀಯ ರಕ್ಷಿಸು ರಕ್ಷಿಸೆಂದೆನಲ್। ಮಾಯವಾಗಲು ಹರನು ಕಾಣುತ। ರಾಯ ಸೈಂಧವ ಬಂದ ಕೌರವ। ರಾಯ ನೆಡೆಗೆ ॥೩॥ ಬಂದು ನೋಡುತಲಾಗ ಲಂಧಕ। ನಂದನನು ಸೈಂಧವನ ಮುಹದಾ। ನಂದ ದಿಂದಲಿ ಸತ್ಕರಿಸಿದನು। ಚಂದದಿಂದ ॥೪॥ ಜಯತು ಜಯ ಗೌರೀಶ ಜಯ ಜಯ। ಜಯತು ದುಃಖವಿನಾಶ ಜಯ ಜಯ। ಜಯವೆನುತ್ತಲಿ ನುತಿಸಿದರು ಗಣ। ರಾಯ ಪಿತನ ॥೫॥ ॥೩೩೪॥

ಮಂಗಲಪದ

ಪಾರ್ವತಿಸುತ ಲಂಬೋಧರಗೆ। ಪೂರ್ವದಿ ಪೂಜೆಯ ಗೊಂಬವಗೆ। ಗರ್ವವ ಬಿಡುತಲಿ ಧ್ಯಾನಿಪ ಭಕುತರ। ಸರ್ವಕಾಲದಿ ಪೊರೆವಂತವಗೆ ॥ ಮಂಗಲಂ ಜಯ ಮಂಗಲಂ ॥೧॥ ಮೋದಕ ಹಸ್ತ ವಿಭೂಷಿತಗೆ। ಸಾಧು ಸಜ್ಜನಸಂಸೇವಿತಗೆ। ಆದರದಿಂದಲಿ ಪೂಜಿಪ ಭಕುತರ। ಮೋದದಿಂದಲಿ ತಾ ಸಲಹುವಗೆ ॥ ಮಂಗಲಂ ಜಯ ಮಂಗಲಂ ॥೨॥ ಮೂಷಿಕ ವಾಹನ

Scanned by CamScanner

ನಾದವಗೆ । ವಾಸವಾರ್ಜಿತ ಗಜಾನನಗೆ । ತೋಽಷದಿ ಮಂಡಸ ಪುರದೊಳು ನೆಲಸಿಹ । ಈಶನ ಸುತ ವಿಘ್ನೇಶ್ವರಗೆ ॥ ಮಂಗಲಂ ಜಯ ಮಂಗಲಂ ॥೩॥

॥೩೭॥

॥ ಶ್ರೀ ಕೃಷ್ಣಾರ್ಪಣಮಸ್ತು ॥